ಸಂಪುಟ 01 । ಸಂಚಿಕೆ 211 । ಶನಿವಾರ 27 ಜೂನ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತಾರಾಷ್ಟ್ರೀಯ ಪೈನಾಪಲ್ ದಿನ
ಉಷ್ಣವಲಯದ ಹಣ್ಣಾದ ಪೈನಾಪಲ್‌ನ ಆರೋಗ್ಯ ಪ್ರಯೋಜನಗಳು ಮತ್ತು ಅದರ ಸಿಹಿಯನ್ನು ಕೊಂಡಾಡುವ ದಿನ.

2) ರಾಷ್ಟ್ರೀಯ ಸನ್ಗ್ಲಾಸ್ ದಿನ
ಸೂರ್ಯನ ಹಾನಿಕಾರಕ ಯುವಿ ಕಿರಣಗಳಿಂದ ಕಣ್ಣುಗಳನ್ನು ರಕ್ಷಿಸಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುವ ದಿನ.

3) ಪಿಟಿಎಸ್‌ಡಿ ಜಾಗೃತಿ ದಿನ
ಆಘಾತಕಾರಿ ಅನುಭವಗಳಿಂದ ಬಳಲುತ್ತಿರುವವರ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ದಿನ.

## ಸುಭಾಷಿತ

ಕಾಲ ಎಲ್ಲವನ್ನೂ ತೋರಿಸುತ್ತದೆ. ಸಹನೆ ಎಲ್ಲವನ್ನೂ ಗೆಲ್ಲಿಸುತ್ತದೆ. ನಂಬಿಕೆ ದಾರಿ ತೋರಿಸುತ್ತದೆ. ಅನುಭವ ಗುರಿ ತಲುಪಿಸುತ್ತದೆ.

~ ಶ್ರೀ ಸಿದ್ಧೇಶ್ವರ ಸ್ವಾಮೀಜಿ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಆಪರೇಷನ್ ಸಿಂಧೂರ್‌ನಲ್ಲಿ ಹುತಾತ್ಮರಾದ 6 ಯೋಧರ ಹೆಸರು ಪ್ರಕಟಿಸಿದ ಸರ್ಕಾರ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಕಳೆದ ವರ್ಷ ಮೇ ತಿಂಗಳಲ್ಲಿ ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತಿಯಾಗಿ ಭಾರತ ಕೈಗೊಂಡ 'ಆಪರೇಷನ್ ಸಿಂಧೂರ್' ವೇಳೆ ಕರ್ತವ್ಯ ನಿರ್ವಹಿಸುವಾಗ ಹುತಾತ್ಮರಾದ ಆರು ಯೋಧರ ಹೆಸರನ್ನು ಕೇಂದ್ರ ಸರ್ಕಾರ ಮೊದಲ ಬಾರಿಗೆ ಅಧಿಕೃತವಾಗಿ ಪ್ರಕಟಿಸಿದೆ.

ಹುತಾತ್ಮರಾದವರಲ್ಲಿ ಭಾರತೀಯ ಸೇನೆಯ ಸುಬೇದಾರ್ ಮೇಜರ್ ಪವನ್ ಕುಮಾರ್, ರೈಫಲ್‌ಮನ್ ಸುನೀಲ್ ಕುಮಾರ್, ಲಾನ್ಸ್ ನಾಯಕ್ ದಿನೇಶ್ ಕುಮಾರ್, ಅಗ್ನಿವೀರ್ ಮುರಳಿ ನಾಯಕ್, ಹವಿಲ್ದಾರ್ ಸುನೀಲ್ ಕುಮಾರ್ ಸಿಂಗ್ ಹಾಗೂ ಭಾರತೀಯ ವಾಯುಪಡೆಯ ಸಾರ್ಜೆಂಟ್ ಸುರೇಂದ್ರ ಕುಮಾರ್ ಸೇರಿದ್ದಾರೆ.

ಈ ಯೋಧರ ಹೆಸರುಗಳನ್ನು ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿರುವ ರಾಷ್ಟ್ರೀಯ ಯುದ್ಧ ಸ್ಮಾರಕದ (National War Memorial) 'ತ್ಯಾಗ ಚಕ್ರ'ದಲ್ಲಿ ಶಾಶ್ವತವಾಗಿ ಕೆತ್ತಲಾಗುತ್ತದೆ. ಸ್ವಾತಂತ್ರ್ಯಾನಂತರ ದೇಶಕ್ಕಾಗಿ ಪ್ರಾಣ-ತ್ಯಾಗ ಮಾಡಿದ ಪ್ರತಿಯೊಬ್ಬ ಯೋಧರ ಹೆಸರು, ಹುದ್ದೆ ಹಾಗೂ ಘಟಕದ ವಿವರಗಳನ್ನು ಈ ಸ್ಮಾರಕದಲ್ಲಿ ದಾಖಲಿಸುವ ಸಂಪ್ರದಾಯವಿದೆ.

ಕೇಂದ್ರ ಸರ್ಕಾರವು 2025ರಲ್ಲಿ ವಿವಿಧ ಸೇನಾ ಕಾರ್ಯಾಚರಣೆಗಳಲ್ಲಿ ಹುತಾತ್ಮರಾದ ಯೋಧರ ಸಂಪೂರ್ಣ ಪಟ್ಟಿಯೊಂದಿಗೆ ಆಪರೇಷನ್ ಸಿಂಧೂರ್‌ನಲ್ಲಿ ವೀರಮರಣ ಹೊಂದಿದ ಈ ಆರು ಯೋಧರ ಹೆಸರನ್ನೂ ಪ್ರಕಟಿಸಿದೆ.

ಗಮನಾರ್ಹವಾಗಿ, 2025ರ ಮೇ 7ರಂದು ಪಹಲ್ಗಾಮ್ ಉಗ್ರ ದಾಳಿಯಲ್ಲಿ 26 ಮಂದಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಭಾರತವು ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಗಡಿಯಲ್ಲಿ ನಾಲ್ಕು ದಿನಗಳ ಕಾಲ ತೀವ್ರ ಸಂಘರ್ಷ, ಡ್ರೋನ್ ದಾಳಿ ಮತ್ತು ಗುಂಡಿನ ಚಕಮಕಿ ನಡೆದಿದ್ದು, ಮೇ 10ರಂದು ಸಂಘರ್ಷ ಅಂತ್ಯಗೊಂಡಿತ್ತು.

'ಸಿಂಧೂರ್' ಎಂಬ ಹೆಸರಿನ ಮೂಲಕ ಉಗ್ರ ದಾಳಿಯಲ್ಲಿ ಪತಿಗಳನ್ನು ಕಳೆದುಕೊಂಡ ಮಹಿಳೆಯರ ನೋವಿಗೆ ಪ್ರತೀಕಾರದ ಸಂಕೇತವಾಗಿ ಈ ಕಾರ್ಯಾಚರಣೆಗೆ ಹೆಸರು ನೀಡಲಾಗಿತ್ತು. ಈಗ ಆಪರೇಷನ್ ಸಿಂಧೂರ್‌ನಲ್ಲಿ ದೇಶಕ್ಕಾಗಿ ಪ್ರಾಣ ಅರ್ಪಿಸಿದ ಈ ಆರು ವೀರ ಯೋಧರ ಹೆಸರುಗಳು ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಶಾಶ್ವತವಾಗಿ ಅಚ್ಚಳಿಯದೆ ಉಳಿಯಲಿವೆ.




# ಕಂಪ್ಲಿಯಲ್ಲಿ ಅದ್ದೂರಿಯಾಗಿ ಆಚರಿಸಿದ ಜನಪರ ಸೇವೆಗೈಯ್ಯದ ಪುರಸಭೆ ಮಾಜಿ ಅಧ್ಯಕ್ಷ ಭಟ್ಟ ಪ್ರಸಾದ್ ಜನ್ಮದಿನಾಚರಣೆ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪುರಸಭೆ ಮಾಜಿ ಅಧ್ಯಕ್ಷ ಭಟ್ಟ ಪ್ರಸಾದ್ ಇವರು ತಮ್ಮ ಪುರಸಭೆ ಆಡಳಿತದ ಅವಧಿಯಲ್ಲಿ ಸಾಕಷ್ಟು ಜನಪರ ಸೇವೆಗೈಯ್ಯುವ ಮೂಲಕ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ ಎಂದು ಯುವ ಮುಖಂಡ ಅಕ್ಕಿ ಜಿಲಾನ್ ಹೇಳಿದರು.

ಪಟ್ಟಣದ ಗಂಗಾವತಿ ರಸ್ತೆಯ ಹಜರತ್ ಬಡೇಸಾಹೇಬ್ ದರ್ಗಾದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಭಟ್ಟ ಪ್ರಸಾದ್ ಅವರ ಜನ್ಮದಿನಾಚರಣೆ ಪ್ರಯುಕ್ತ ಕೇಕ್ ಕತ್ತರಿಸಿ, ಸಿಹಿ ತಿನ್ನಿಸುವ ಮೂಲಕ ಜನ್ಮದಿನ ಆಚರಿಸಿದ ನಂತರ ಮಾತನಾಡಿ, ಜೀವದುದ್ದಕ್ಕೂ ಜನಪರ ಕೆಲಸ ಮಾಡಿಕೊಂಡು ಬಂದಿದ್ದಾರೆ. ಪುರಸಭೆಯ ಅಲ್ಪ ಅವಧಿಯಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡಿದ್ದಾರೆ. ಜನರ ಕಷ್ಟ ಕಾರ್ಪಣ್ಯಗಳಿಗೆ ನಿರಂತರವಾಗಿ ಸ್ಪಂದಿಸುತ್ತಿದ್ದಾರೆ. ಆದ್ದರಿಂದ ಇಂತಹ ನಾಯಕರಿಗೆ ಎಲ್ಲಾ ರಂಗದಲ್ಲಿ ಅತ್ಯುತ್ತಮ ಸ್ಥಾನ ಲಭಿಸಬೇಕು. ಇವರಿಗೆ ಆ ದೇವರು ಆಯಸ್ಸು, ಆರೋಗ್ಯದ ಜೊತೆಗೆ ಇನ್ನಷ್ಟು ಸಮಾಜಸೇವೆಗೆ ಶಕ್ತಿ ನೀಡಲಿ ಎಂದು ಹಾರೈಯಿಸಿದರು.

ನಂತರ ಪುರಸಭೆ ಮಾಜಿ ಅಧ್ಯಕ್ಷ ಭಟ್ಟ ಪ್ರಸಾದ್ ಅವರ ಸಮ್ಮುಖದಲ್ಲಿ ಕೇಕ್ ಕತ್ತರಿಸಿ, ಸಿಹಿ ಹಂಚುವ ಮೂಲಕ ವಿಜೃಂಭಣೆಯಿಂದ ಜನ್ಮದಿನ ಆಚರಿಸಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಸದಸ್ಯ ಲೊಡ್ಡು ಹೊನ್ನೂರವಲಿ, ಆಪ್ತ ಸಹಾಯಕ ಧನ್‌ರಾಜ್, ಮುಖಂಡರಾದ ಇಮ್ರಾನ್, ಮೈನು, ಬೆಳಗೋಡ್ ಜಾವೀದ್, ಬಿ.ಬಾಷಾ, ಬಿ.ಹಸನ್, ಆಟೋ ಮೈನುದ್ದಿನ, ಬಾಲಕೃಷ್ಣ, ಆದಿಶೇಷಯ್ಯ, ಶ್ರೀಧರ್ ಇದ್ದರು.



# "ಏನಾಯಿತು" ಮುಹೂರ್ತದೊಂದಿಗೆ ಚಿತ್ರೀಕರಣ ಆರಂಭ

ನೈಜ್ಯ ದೆಸೆ ನ್ಯೂಸ್

ಹುಬ್ಬಳ್ಳಿ :ಉತ್ತರ ಕರ್ನಾಟಕದಲ್ಲಿ ಹೆಚ್ಚು ಸಿನಿಮಾಗಳು ತಯಾರಾಗಲಿ. ಇಲ್ಲಿನ ಕಲಾವಿದರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿ ಎಂದು ಸ್ವರ್ಣ ಗ್ರೂಪ್ ಕಂಪನಿ ಎಂಡಿ ಡಾ. ಸಿ.ಎಚ್.ವಿ. ಎಸ್.ವಿ ಪ್ರಸಾದ್ ಹೇಳಿದರು.

ಅವರು ಹುಬ್ಬಳ್ಳಿ ಸಿದ್ದಾರೂಢ ಮಠದಲ್ಲಿ ನಡೆದ ವಿಸ್ಮಯ ವೆಂಚರ್ಸ್ ನಿರ್ಮಾಣದ "ಏನಾಯಿತು" ಕನ್ನಡ ಚಲನಚಿತ್ರಕ್ಕೆ ಕ್ಯಾಮೆರಾ ಚಾಲನೆ ನೀಡಿ ಉತ್ತಮ ಸದಬಿರುಚಿಯ ಚಿತ್ರಗಳು ಹೆಚ್ಚು ಹೊರಬರಬೇಕಿದೆ. ಉತ್ತರ ಕರ್ನಾಟಕದಲ್ಲಿ ಹಲವು ಕಲಾವಿದರು ತಂತ್ರಜ್ಞರು ಇದ್ದಾರೆ ಇವರಿಗೆಲ್ಲ ಇನ್ನಷ್ಟು ಅವಕಾಶ ಸಿಗಬೇಕಾಗಿದೆ ಆ ನಿಟ್ಟಿನಲ್ಲಿ ಈ ಭಾಗದಲ್ಲಿ ಸಿನಿಮಾ ಕೆಲಸಗಳು ಹೆಚ್ಚು ನಡೆಯಬೇಕಿದೆ ಎಂದರು. ಕ್ಲಾಪ್ ಮಾಡಿದ ಸಿದ್ಧಾರೂಢ ಮಠ ಟ್ರಸ್ಟ್ ಚೇರ್ಮನ್ ಬಾಳು ಮಗಜಿಕೊಂಡಿ ಮಾತನಾಡಿ ಇಡೀ ಕುಟುಂಬದವರು ಕುಳಿತು ನೋಡುವ ಹಾಗೂ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಲನಚಿತ್ರಗಳು ಹೊರಬರಲಿ ಎಂದರು.

ಮುಖ್ಯ ಅತಿಥಿಗಳಾಗಿ ಎವಿಕೆ ಫೌಂಡೇಶನ್ ವೆಂಕಟೇಶ್ ಕಾಟವೆ, ಹಿರಿಯ ಕವಿ ಮಹಾಂತಪ್ಪ ನಂದೂರ್, ಡಾ. ರಾಮು ಮುಲಗಿ ಹಾಗೂ ನಾಯಕ ನಟ ಈಶಾನ್ ರಘುರಾಜನ್, ನಟಿ ಚೈತ್ರ ತೋಟದ್, ನಿರ್ದೇಶಕ ತಮನ್ನಾ, ಚಲನಚಿತ್ರ ಪತ್ರಕರ್ತ, ಪಿ.ಆರ್ ಓ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ವಿನಾಯಕ ಶೆಟ್ಟಿ, ನವೀನ ಪಾಟೀಲ ಜೈನ್ ,ರಾಘು ಬುಧಪನವರ್, ಕೃಷ್ಣ ಉಲ್ಲಿಕಾಶಿ ಚಿತ್ರ ತಂಡದವರು ಪಾಲ್ಗೊಂಡಿದ್ದರು.

ಛಾಯಾಗ್ರಹಣ ಗೌರಿ ವೆಂಕಟೇಶ , ಕಥೆ ಡಾ.ಶೈಲಜಾ ಶರ್ಮ, ಸಾಹಿತ್ಯ ಸಂಭಾಷಣೆ-ಚಿತ್ರಕಥೆ ಈಶಾನ ರಘುರಾಜನ್, ಸಂಗೀತ ವಿ.ಮನೋಹರ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ನಿರ್ದೇಶನ ತಮನ್ನ ಅವರದಿದೆ. ಹುಬ್ಬಳ್ಳಿ-ಧಾರವಾಡ ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ , ಉತ್ತರ ಕರ್ನಾಟಕದ ಕಲಾವಿದರಿಗೆ ಹೆಚ್ಚಿನ ಅವಕಾಶ ಕಲ್ಪಿಸಲಗಿದೆ ಎಂದು ನಿರ್ದೇಶಕ ತಮನ್ನ ತಿಳಿಸಿದ್ದಾರೆ.

-ಡಾ.ಪ್ರಭು ಗಂಜಿಹಾಳ



# ಎಸ್ ಐ ಆರ ಕುರಿತು ಮನೆಮನೆಗೆ ತೆರಳಿ ಜಾಗೃತಿ ಮೂಡಿಸಿದ ಮೌಲಾನಾ ಅಬುಲ್ ಕಲಾಂ ಅಜಾದ್ ಮುಸ್ಲಿಂ ಅಭಿವೃದ್ಧಿ ಸಮಿತಿ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಕಂಪ್ಲಿಯಲ್ಲಿ ಡಾ.ಮೌಲಾನಾ ಅಬುಲ್ ಕಲಾಂ ಅಜಾದ್ ಮುಸ್ಲಿಂ ಅಭಿವೃದ್ಧಿ ಸಮಿತಿಯಿಂದ ಮತಪಟ್ಟಿ ಪರಿಷ್ಕರಣೆ(-ಎಸ್‌ಐಆರ್)ಕುರಿತು ಮನೆಮನೆಗೆ ತೆರಳಿ ಜಾಗೃತಿ ಮೂಡಿಸಲಾಯಿತು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ರಾಜಾಭಕ್ಷಿ ಮಾತನಾಡಿ, ಎಸ್‌ಐಆರ್ ಗಾಗಿ ಮನೆಗೆ ಗಣತಿದಾರರು ಬಂದಾಗ ಅಗತ್ಯ ದಾಖಲೆಗಳನ್ನು ಒದಗಿಸಲು ಈಗಲೇ ದಾಖಲಾತಿ ಸಂಗ್ರಹಿಸಿಟ್ಟುಕೊಟ್ಟುವಂತೆ, ಸೂಕ್ತ ಮಾಹಿತಿಯನ್ನು ತಪ್ಪಿಲ್ಲದಂತೆ ನೀಡುವಂತೆ, ಹೆಸರು, ವಿಳಾಸ, ಅಥವಾ ವಯಸ್ಸಿನಲ್ಲಿ ಯಾವುದೇ ತಪ್ಪುಗಳಿದ್ದರೆ ಅದನ್ನು ಸರಿಪಡಿಸಿಕೊಳ್ಳಲು ಫಾರ್ಮ್‌ಗಳನ್ನು ಭರ್ತಿ ಮಾಡುವ ವಿಧಾನ ಬಿಎಲ್‌ಒ ಮತದಾರರ ಪಟ್ಟಿ ಪರಿಷ್ಕರಣೆ ಕುರಿತಂತೆ ಬೂತ್ ಮಟ್ಟದ ಅಧಿಕಾರಿಗಳನ್ನು ಹೇಗೆ ಸಂಪರ್ಕಿಸಬೇಕು ಎಂಬ ಬಗ್ಗೆ ಮಾರ್ಗದರ್ಶನದ ಬಗ್ಗೆ ತಿಳಿಸಿದರು. ಸಮಿತಿಯ ಪದಾಧಿಕಾರಿಗಳಾದ ಸೈಯ್ಯದ್ ರಾಜಾಸಾಬ್, ಸೈಯ್ಯದ್ ಬಾಬುಸಾಬ್, ಅಲ್ಲಾಭಕ್ಷಿ, ಹುಸೇನ್‌ಬಾಷಾ, ನೂರ್‌ಬಾಷಾ, ಎಂ.ಮೆಹಬೂಬ್, ಹೊನ್ನೂರಸಾಬ್, ಮೆಹ ಬೂಬ್, ಬುಡೇನ್‌ಸಾಬ್, ಹಸೇನ್ ಸಾಬ್ ಇತರರಿದ್ದರು.



# ಜಾಲಹಳ್ಳಿಯಲ್ಲಿ ಅದ್ದೂರಿಯಾಗಿ ಮೊಹರಂ ಹಬ್ಬದ ಕತ್ತಲ್ ರಾತ್ರಿ ಆಚರಣೆ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ನಡೆಯುವ ಮೊಹರಂ ಹಬ್ಬವು ಉತ್ತರ ಕರ್ನಾಟಕದ ಪ್ರಮುಖ ಮೊಹರಂ ಆಚರಣೆಗಳಲ್ಲಿ ಒಂದಾಗಿದೆ. ಮುದಗಲ್ ನಂತರ ಉತ್ತರ ಕರ್ನಾಟಕದ ಎರಡನೇ ಅತಿ ದೊಡ್ಡ ಮೊಹರಂ ಆಚರಣೆಯೆಂದು ಪರಿಗಣಿಸಲ್ಪಡುವ ಜಾಲಹಳ್ಳಿಗೆ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ.

ಹಬ್ಬದ ಅಂಗವಾಗಿ 5ನೇ ತಾರೀಖಿನಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡಿದ್ದು, 9ನೇ ತಾರೀಖಿನ "ಕತ್ತಲ್ ರಾತ್ರಿ" ಕಾರ್ಯಕ್ರಮವನ್ನು ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಊರಿನ ರಾಜವಂಶಸ್ಥರು ಹಾಗೂ ವತಂದಾರರ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಜಾತಿ-ಧರ್ಮ ಭೇದವಿಲ್ಲದೆ ಎಲ್ಲಾ ಸಮುದಾಯಗಳ ಸಾರ್ವಜನಿಕರು ಭಾಗವಹಿಸಿ ಕೋಮು ಸೌಹಾರ್ದತೆಗೆ ಮಾದರಿಯಾದರು.

9ನೇ ತಾರೀಖಿನ ಅಂಗವಾಗಿ ಬೆಳಗಿನ ಜಾವ ಸುಮಾರು 4 ಗಂಟೆಗೆ ಇಮಾಮ್ ಹುಸೇನ್ ಹಾಗೂ ಸೈಯದ್ ಕಾಸಿಂ ಅವರ ಮೆರವಣಿಗೆಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದವು.



ಮಹಿಬೂಬ್ ದಾದೆಬಾಯಿ (ಧಾರವಾಡ) ಅವರು ಮಾತನಾಡಿ, "ಉತ್ತರ ಕರ್ನಾಟಕದಲ್ಲಿ ಮುದಗಲ್ ಮೊಹರಂ ಹಬ್ಬ ಮೊದಲ ಸ್ಥಾನದಲ್ಲಿದ್ದರೆ, ಜಾಲಹಳ್ಳಿ ಮೊಹರಂ ಹಬ್ಬ ಎರಡನೇ ಸ್ಥಾನದಲ್ಲಿದೆ. ವಿವಿಧ ಜಾತಿ-ಧರ್ಮದ ಜನರು ಒಗ್ಗಟ್ಟಿನಿಂದ ಹಬ್ಬ ಆಚರಿಸುವುದು ಜಾಲಹಳ್ಳಿಯ ವಿಶೇಷತೆ. ಎಲ್ಲಾ ಕಾರ್ಯಕ್ರಮಗಳು ರಾಜವಂಶಸ್ಥರು ಹಾಗೂ ವತಂದಾರರ ನೇತೃತ್ವದಲ್ಲಿ ನಡೆಯುತ್ತವೆ. ವಿವಿಧ ರಾಜ್ಯಗಳಿಂದ ಸಾವಿರಾರು ಭಕ್ತರು ಆಗಮಿಸುವುದು ಈ ಹಬ್ಬದ ಮತ್ತೊಂದು ವಿಶೇಷವಾಗಿದೆ" ಎಂದು ಹೇಳಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಈ ಸಂದರ್ಭದಲ್ಲಿ ಮಾತನಾಡಿದ ಶಬ್ಬೀರ್ ಜಾಲಹಳ್ಳಿ ಅವರು, 9ನೇ ತಾರೀಖಿನ "ಕತ್ತಲ್ ರಾತ್ರಿ" ಕಾರ್ಯಕ್ರಮವು ಅದ್ದೂರಿಯಾಗಿ ನಡೆದಿದ್ದು, ಇಮಾಮ್ ಹುಸೇನ್ ಹಾಗೂ ಸೈಯದ್ ಕಾಸಿಂ ಮೆರವಣಿಗೆಗಳು ಊರಿನ ರಾಜವಂಶಸ್ಥರು ಹಾಗೂ ವತಂದಾರರ ನೇತೃತ್ವದಲ್ಲಿ ಸಾಗಿದವು ಎಂದು ಹೇಳಿದರು.
ಅಲ್ಲದೆ, ಜೂನ್ 26ರಂದು ಮೊಹರಂ ಹಬ್ಬದ ಕೊನೆಯ ದಿನದ ಅಂಗವಾಗಿ ಆಶೀರ್ ಖಾನ್‌ನಿಂದ ಆರಂಭವಾಗುವ ಮೆರವಣಿಗೆಯು ಜಾಲಹಳ್ಳಿಯ ದೇಸಾಯಿ ಕುಟುಂಬದವರ ತೋಟದ ಮೈದಾನದಲ್ಲಿ ಸಮಾರೋಪಗೊಂಡು ಅಂತಿಮ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ ಎಂದು ತಿಳಿಸಿದರು.

ತಿಮ್ಮಣ್ಣ ನಾಯಕ್ ದಿದಗಿ ಅವರು ಮಾತನಾಡಿ, "ಜಾಲಹಳ್ಳಿಯ ಮೊಹರಂ ಹಬ್ಬವು ಜಾತಿ-ಧರ್ಮ ಭೇದವಿಲ್ಲದೆ ಎಲ್ಲ ಸಮುದಾಯದವರು ಒಗ್ಗಟ್ಟಿನಿಂದ ಆಚರಿಸುವ ಕೋಮು ಸೌಹಾರ್ದದ ಸಂಕೇತವಾಗಿದೆ" ಎಂದು ಹೇಳಿದರು.

ಹೈದರ್ ಸಾಬ್ ಕೊಪ್ಪರ್ ಮುಲ್ಲಾ ಅವರು, ಆಶೀರ್ ಖಾನ್ ಮಸೀದಿಯಿಂದ ಆರಂಭವಾದ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳ ಮೂಲಕ ಗರಿಗಲಿ ದರ್ಗಾಕ್ಕೆ ತೆರಳಿ ದರ್ಶನ ಪಡೆದ ಬಳಿಕ ಬೆಳಿಗ್ಗೆ 8 ಗಂಟೆಗೆ ಸಮಾಪ್ತಿಯಾಯಿತು ಎಂದು ತಿಳಿಸಿದರು.
ಈ ಸಂದರ್ಭದಲ್ಲಿ ಊರಿನ ರಾಜವಂಶಸ್ಥರಾದ ರಾಜ ತಿಮ್ಮಪ್ಪ ನಾಯಕ್, ತಿಮ್ಮಣ್ಣ ನಾಯಕ್ ದಿದಗಿ, ರಂಗಪ್ಪ ಬಂಡಿ, ಮೌನೇಶ್ ಪೂಜಾರಿ, ಶಿವಪ್ಪ ಬೋರಬಾಯಿ, ಯಾಸಿನ್ ಮುಲ್ಲಾ, ಗೌಸ್ ಮುಲ್ಲಾ, ಹುಸೇನ್ ಬಾಷಾ ಸರ್ನೋಬತ್, ಇಬ್ರಾಹಿಂ, ಆರತಿ ಪೂಜಾರಿ, ಬಾಬು ಕಕ್ಕೇರ, ಹೈದರಾಲಿ ಮುಲ್ಲಾ, ಮಹಿಬೂಬ್ ದಾದೆಬಾಯಿ, ಬಬ್ಬು ಬಳಿಗಾರ, ಮಹಮ್ಮದ್ ರಫಿ ಸರ್ನೋಬತ್, ಜಾಕಿರ್ ಹುಸೇನ್ ಆರತಿ, ರಾಜ್ ಮಹಮ್ಮದ್ ಸರ್ನೋಬತ್, ಭಾಷಾ ಸರ್ನೋಬತ್, ಬಾಶುಮಿಯ ಕಾರ್ಪೆಂಟರ್ ಸೇರಿದಂತೆ ಎಲ್ಲಾ ವತಂದಾರರು, ಗಣ್ಯರು, ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಹಬ್ಬದ ಹಿನ್ನೆಲೆಯಲ್ಲಿ ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಜಳಕಿ ಅವರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಎಲ್ಲಾ ಕಾರ್ಯಕ್ರಮಗಳು ಶಾಂತಿಯುತವಾಗಿ ಹಾಗೂ ಯಶಸ್ವಿಯಾಗಿ ನೆರವೇರಿದವು.

## ಸಾಹಿತ್ಯ ಸಿಂಚನ

ಸಮ್ಮತಿಸು ಇಲ್ಲ ಒಮ್ಮತಿಸು

ತಲೆ ಆಡಿಸೋ ಗೊಂಬೆ ನಾನಲ್ಲ
ಹೂಂಗುಟ್ಟೋ ಹಸುಳೆ ನಾನಲ್ಲ
ಕಣ್ಣು ಮುಚ್ಚಿ ಕುಳಿತವನಲ್ಲ
ಪ್ರಶ್ನೆ ಕೇಳದೇ ಒಪ್ಪುವವನಲ್ಲ

ಸಮ್ಮತಿಸು ಎಂದರೆ ಸರಿ ಅನಿಸಬೇಕು
ಮನಸಾಕ್ಷಿ ಹೌದೆಂದು ಹೇಳಬೇಕು
ಸುಳ್ಳಿಗೆ ಜೈ ಎನ್ನಲಾರೆ ನಾನು
ಸತ್ಯಕ್ಕೆ ತಲೆ ಬಾಗುವೆ ನಾನು

ಒಮ್ಮತಿಸು ಎಂದರೆ ಒಗ್ಗೂಡಬೇಕು
ನೂರು ಮನದ ಮಾತು ಒಂದಾಗಬೇಕು
ಬಲವಂತದ ಒಪ್ಪಿಗೆ ಬೇಡವೋ
ಭಯದ ಒಮ್ಮತ ಸಾಕು ಸಾಕೋ

ನನ್ನ ದನಿ ನನ್ನದು, ನಿನ್ನ ದನಿ ನಿನ್ನದು
ಬೇರೆ ಬೇರೆಯಾದರೂ ಚಿಂತೆಯಿಲ್ಲ
ವಾದ ಮಾಡುವೆ, ಜಗಳ ಆಡುವೆ
ಕೊನೆಗೆ ನ್ಯಾಯಕ್ಕೆ ಕೈ ಜೋಡಿಸುವೆ

ಸಮ್ಮತಿಸು ಇಲ್ಲ ಒಮ್ಮತಿಸು
ಆದರೆ ಗುಲಾಮನಾಗಬೇಡ
ಯೋಚಿಸು, ತಿಳಿ, ಆಮೇಲೆ ಹೇಳು
ನಿನ್ನ ನಿಲುವು ನಿನ್ನದೇ ಆಗಿರಲಿ

:- ಎಸ್. ದುರಗಪ್ಪ.ಕುಷ್ಟಗಿ.

# "ಗಿಡ ನೆಟ್ಟು ಪರಿಸರ ಬೆಳೆಸಿ ಉಸಿರು ಉಳಿಸೋಣ"

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ:** ಖಾದ್ರಿಯವರ ಗ್ರೀನ್ ಸಿಟಿ, ಕ್ಲೀನ್ ಸಿಟಿ ಎಂಬ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿ ನೆಟ್ಟು ಬೆಳೆಸುವ ಸಂಕಲ್ಪ ಮಾಡಬೇಕು. ಇಂದು ನಾವು ನೆಡುವ ಒಂದು ಹಸಿರು ಗಿಡ ಮುಂದಿನ ಪೀಳಿಗೆಗೆ ಸಾವಿರಾರು ಜನರಿಗೆ ಆಮ್ಲಜನಕ ನೀಡುವ ಜೀವನಾಡಿಯಾಗಲಿದೆ ಎಂದು ಮುಫ್ತಿ ಸೈಯದ್ ಹಸನ್ ಜೀಶಾನ್ ಖಾದ್ರಿ ಖಾಸ್ತ್ರಿ ಮೌಲಾನ ಹೇಳಿದರು.

ಪಟ್ಟಣದ ಭಾಷುಮಿಯ ಸಾಹುಕಾರ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾನ್ವಿ ಯುವ ಬಳಗ, ಗ್ಲೋಬಲ್ ಕಂಪ್ಯೂರ್ಟ್, ಭಾರತ ಆಪ್ಟಿಕಲ್ಸ್ ಸಿರವಾರ, ರಾತಿಬ್ ಫುಡ್ ಡೆಲಿವರಿ ಆ?ಯಪ್ ಹಾಗೂ ಮಾನಸ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಮಾನ್ವಿಯ ಗುಡ್ಡದ ಮೇಲೆ ನಿಂತಾಗ ಕಾಣುವ ಹಸಿರು ಮರಗಳು ನಮ್ಮ ಪೂರ್ವಜರು ನೆಟ್ಟ ಸಸಿಗಳ ಕೊಡುಗೆಯಾಗಿದೆ. ಒಂದು ಕಾಲದಲ್ಲಿ ರಾಯಚೂರು ರಸ್ತೆಯ ಕೊನೆಯ ತುದಿಯಿಂದ ಬಸ್ ನಿಲ್ದಾಣದವರೆಗೆ ಹಸಿರಿನಿಂದ ಕಂಗೊಳಿಸುತ್ತಿದ್ದ ಮರಗಳು ಇಂದು ಕಾಣೆಯಾಗಿವೆ. ಅವುಗಳನ್ನು ಮರಳಿ ತರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಗಿಡ ನೆಟ್ಟವರಿಗೆ ಪುಣ್ಯ ದೊರೆಯುತ್ತದೆ ಹಾಗೂ ಸ್ವರ್ಗದಲ್ಲಿ ಸ್ಥಾನ ಸಿಗುತ್ತದೆ ಎಂದು ಮಹಮ್ಮದ್ ಪ್ರವಾದಿಯವರು ಹೇಳಿದ್ದಾರೆ ಎಂದು ಅವರು ತಿಳಿಸಿದರು.

ಧರ್ಮಗುರು ಸೈಯದ್ ಅಹಮದ್ ಖಾದ್ರಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ದೊಡ್ಡ ಬಸಪ್ಪ ಗೌಡ, ಶಾಸಕರ ಪುತ್ರ ವಕೀಲ ಶಿವರಾಜ್, ಪ್ರಾಂಶುಪಾಲ ಜೆ.ಎಲ್.ಈರಣ್ಣ, ನಗರಸಭೆ ಮಾಜಿ ಅಧ್ಯಕ್ಷ ಬಸವಂತಪ್ಪ, ರಾಜಾ ಶ್ಯಾಮಸುಂದರ್ ನಾಯಕ್, ಸಿಡಿಸಿ ಸದಸ್ಯ ಸಿ.ಗುರುರಾಜ್, ನಂದಿಕೋಲ್ ಮಠದ ಪ್ರತಿನಿಧಿಗಳು, ಪ್ರಾಧ್ಯಾಪಕಿ ಸೈಯದ್ ಮಿನ್ನಾಜ್ ಉಲ್ ಹಾಸನ್, ಪ್ರಾಧ್ಯಾಪಕಿ ಸೈಯದ್ ಮಿನ್ನಾಜ್ ಉಲ್ ಹಾಸನ್, ರುಹಿರಾಲ್ ಅಭಿವೃದ್ಧಿ ಸಂಘದ ಅಧ್ಯಕ್ಷೆ ಎಸ್. ನಜೀರ್ ಖಾದ್ರಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯ ಜೀಶಾನ್ ಅಖಿಲ್ ಸಿದ್ದಿಕಿ ಸ್ವಾಗತಿಸಿದರು. ಮಹಿಬೂಬ್ ಮದ್ಲಾಪುರ ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ಶೇಕ್ ಸೈಫುದ್ದಿನ್ ಅಜಗರ್, ಸೈಯದ್ ಮುಜಾಹಿದ್ ಮೈನುದ್ದೀನ್ ಖಾದ್ರಿ, ಮಹಮ್ಮದ್ ಶೋಹಿಬ್, ಶೇಕ್ ಆಸಿಫ್, ಜುಬೇರ್, ಆಫ್ಲಾಬ್, ಫಯಾಜ್, ಉರ್ಮೈ, ಸಾಬಿರ್, ಇರ್ಫಾನ್, ಅಮೀರ್ ಸೇರಿದಂತೆ ವಿವಿಧ ಪಕ್ಷಗಳು, ಸಂಘ-ಸಂಸ್ಥೆಗಳು ಹಾಗೂ ಸಮುದಾಯದ ಗಣ್ಯರು ಭಾಗವಹಿಸಿ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು.



# "ಚಾಲಾಕಿ ಮಹಿಳಾ ಕಳ್ಳಿಯಿಂದ ಹಾಡು ಹಗಲೇ ಕಳ್ಳತನ"


**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದಲ್ಲಿ ಇತ್ತೀಚಿಗೆ ಬಸ್ ನಿಲ್ದಾಣ ಮತ್ತು ಅಕ್ಕಪಕ್ಕದಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿವೆ. ಮೊಬೈಲ್ ಕಳವು ಇರಲಿ ಅಥವಾ ಪ್ಯಾಕೆಟ್ ಕಳವು ಇರಲಿ ಕಳ್ಳರನ್ನ ಗುರುತು ಹಿಡಿಯುವುದು ನಮ್ಮ ಮಾನ್ವಿ ಪೊಲೀಸರಿಗೆ ಕಷ್ಟದ ಕೆಲಸವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.**

ಯಾಕಂದ್ರೆ ಸುತ್ತಲೂ ಅಳವಡಿಸಿರುವ ಸಿಸಿ ಟಿವಿಗಳು ಕೇವಲ ಪ್ರದರ್ಶನಕ್ಕೆ ಎಂಬಂತ ಆಗಿವೆ. ಬಸ್ ಹತ್ತುವಾಗ ಎಳಿಯುವಾಗ ಮೊಬೈಲ್ ಕಳುವು ಆಗಿರೋದು ಮತ್ತು ಪ್ಯಾಕೆಟ್ ಕಟ್ ಆಗಿರುವ ಎಷ್ಟೋ ಪ್ರಕರಣಗಳು ಸಂತ್ರಸ್ತರ ಗಮನಕ್ಕೆ ಬಂದಿದೆ. ಅದರಂತೆ ಪಟ್ಟಣದ ಜಿಜಿ ಕಾಂಪ್ಲೆಕ್ಸನಲ್ಲಿರುವ ರಾಜಾರಾಮ್ ಪ್ರಾವಿಜನ್ ಕಿರಾಣಿ ಅಂಗಡಿಯ ಮುಂಭಾಗದಲ್ಲಿ ಮಹಿಳೆಯ 1. 60 ಲಕ್ಷ ಹಣವನ್ನು ಇನ್ನೂರ್ವ ಮಹಿಳಾ ಚಾಲಕಿ ಕಳ್ಳಿ ಹಾಡು ಹಗಲೆ ಕಳ್ಳತನ ಮಾಡಿದ ಘಟನೆ ಬುಧವಾರ ಸಂತೆ ದಿನದಂದು ಮಧ್ಯಾಹ್ನ 1:45 ನಿಮಿಷಕ್ಕೆ ಅಂಗಡಿ ಮುಂಭಾಗದಲ್ಲಿ ನಡೆದಿದೆ.

ಪಟ್ಟಣದ ಕೋನಾಪುರ ಪೇಟೆ ಬೀರಪ್ಪ ದೇವಸ್ಥಾನದ ಬಡಾವಣೆಯಲ್ಲಿ ವಾಸ ಮಾಡುವ ಮಹಿಳೆ ಅಮರಮ್ಮ ಬೋವಿ ಹಣ ಕಳೆದುಕೊಂಡ ಮಹಿಳೆಯಾಗಿದ್ದು ಬ್ಯಾಂಕ್ ಆಫ್ ಬರೋಡದಲ್ಲಿ ಬಂಗಾರವನ್ನ ಅಡವಿಟ್ಟು 1 ಲಕ್ಷ 60 ಸಾವಿರ ರೂಪಾಯಿ ಹಣವನ್ನ ಕವರಲ್ಲಿ ಇಟ್ಟುಕೊಂಡು ಬಂದಿದ್ದಾರೆ. ಈ ಕಿರಾಣಿ ಅಂಗಡಿಯ ಮುಂಭಾಗದಲ್ಲಿರುವ ಜ್ಯೂಸ್ ಅಂಗಡಿಯಲ್ಲಿ ಜ್ಯೂಸ್ ಕುಡಿಯುತ್ತಿದ್ದ ಈ ಮಹಿಳೆಯನ್ನ ಗಮನಿಸಿದ ಕಳ್ಳಿಯು ಅಮರಮ್ಮನ ಬಳಿ ಬಂದು ಕೆಲ ನಿಮಿಷ ನಿಂತು ಕವರ್ ಕಟ್ ಮಾಡಿ ಹಣ ಎಸ್ಕೆಪ್ ಮಾಡಿರೋದು ಸಿಸಿಟಿವಿ ಯಲ್ಲಿ ಸೆರೆಯಾಗಿದೆ.

ಆದರೆ ಸಿಬ್ಬಂದಿಗಳ ಕೊರತೆಯಿಂದ ದೂರು ಕೊಡಲು ಹೋಗಿದ್ದ ಅಮರಮ್ಮ ಗುರುವಾರ ಸಂಜೆಯವರೆಗೆ ಕಾಯುವಂತಾಗಿದೆ. ಮಾನ್ವಿ ಪೊಲೀಸ್ ಠಾಣೆಯಲ್ಲಿ ಬಹು ವರ್ಷಗಳಿಂದ ಪೊಲೀಸರ ಕೊರತೆ ಎದ್ದು ಕಾಣುತ್ತಿದೆ ಎಂಬ ವಿಚಾರ ಸಾರ್ವಜನಿಕರಲ್ಲಿ ಚರ್ಚೆ ಆಗ್ತಾ ಇದೆ ಹಾಗೆ ಮಾನ್ವಿ ಗ್ರಾಮೀಣ ಪೊಲೀಸ್ ಠಾಣಾ ತೀರ ಅಗತ್ಯವಾಗಿದೆ ಆದ-'ರೆ ಪೋತ್ನಾಳ್ ಮತ್ತು ಕುರ್ಡಿ ಎಂಬ ಎರಡು ಹೋಬಳಿಯಲ್ಲಿ ಯಾವ ಕಡೆ ಮಾಡಬೇಕೆಂಬ ಚರ್ಚೆ ಕೇವಲ ರಾಜಕೀಯ ಇಚ್ಚಾಶಕ್ತಿ ಕೊರತೆಯಿಂದ ಚರ್ಚೆಯಾಗಿ ಉಳಿದಿದೆ. ಈ ಸಮಸ್ಯೆಯು ಇದೀಗ ಅಕ್ರಮ ಚಟುವಟಿಕೆ, ಅನೈತಿಕ ವ್ಯವಹಾರ, ಕಳ್ಳತನ ಪ್ರಕರಣಗಳನ್ನ ಹೆಚ್ಚಾಗಲು ಮತ್ತು ಪೊಲೀಸರು ಹೆಡೆಮುರಿ ಕಟ್ಟಿ ಹಾಕಲು ವಿಫಲವಾಗುವಂತಾಗಿದೆ.






## ಹಿಂದೂ ಮುಸ್ಲಿಂ ಭಾವನೆಗಳ ಬೆಸುಗೆಯ ಹಬ್ಬವೇ ಮೊಹರಮ್ ಹಬ್ಬ ಸಂಭ್ರಮ

**ನೈಜ್ಯ ದೆಸೆ ನ್ಯೂಸ್**

**ಹಾಲಾಪೂರ: ಉತ್ತರ ಕರ್ನಾಟಕದ ಬಹುದೊಡ್ಡ ಹಬ್ಬಗಳಲ್ಲಿ ಒಂದಾದ ಮೊಹರಮ್ ಹಬ್ಬವು ಕೂಡ ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಗಮವಾಗಿ ಒಂದು ವಾರಗಳ ಕಾಲ ಅನೇಕ ಸಂಪ್ರದಾಯ,ಸಂಸ್ಕೃತಿಕ ಆಚಾರಗಳನ್ನು ಆಚರಿಸುವ ಹಬ್ಬವಾಗಿದ್ದು,ಹಾಗೆ ಹಾಲಾಪೂರದಲ್ಲಿ ಕೂಡ ಮೊಹರಮ್ ಹಬ್ಬವು ವಿಜೃಂಭಣೆಯಿಂದ ಜರುಗುತ್ತದೆ.**



ಮಸೀದಿಯು ಸುಣ್ಣ ಬಣ್ಣವಿದ್ಯುತ್ ದೀಪಿಗಳಿಂದ ಅಲಂಕೃತಗೊಂಡ ಮಸೀದಿಯು ಇಮಾಮ ಖಾಸಿಂ ಹಸೇನ್ ಹುಸೇನ್ ಹುಸೇನಭಾಷ ಮೌಲಾಲಿ,ಹಜರತ್ ಮೌಲಾಲಿ ಈ ರೀತಿಯಲ್ಲಿ ದೇವರು ಕೂಡಿಸಿ,ಅಗ್ನಿಕೊಂಡ ನಿರ್ಮಿಸಿ ಮಸೀದಿ ಗದ್ದಲದಗೂಡಾಗಿ ಅನೇಕ ಜನರು ಆಗಮಿಸಿ ಕೆಂಪು ಸಕ್ಕರೆ,ಮಾದಲಿ,ಬೆಲ್ಲದಹಾಲು,ಕೊಬರಿ,ಬೆಳ್ಳಿ ಕುದುರೆ,ಲಾಡಿ ದೇವರಿಗೆ ಅರ್ಪಿಸುವುದು ಭಕ್ತಿಯ ಹರಕೆ. ಜೊತಗೆ ಶ್ರೀ ಗಣೇಶ ಪೂಜಾರಿ,ಶ್ರೀ ರಾರಾಯಪ್ಪ ಪೂಜಾರಿ ನೇತೃತ್ವದಲ್ಲಿ ಬಳಗನೂರಿನ ಕಾಟೇಶ ಎಂಬವರಿಂದ ಸ್ಥಳೀಯ ಯುವಕರಿಗೆ ಹೆಜ್ಜೆ ಕುಣಿತ ಕಲಿಸಿ, ಒಂದೇ ರೀತಿಯ ವೇಷಭೂಷಣ ಛತ್ರಿಗೆ ಅಲಂಕಾರ ,ಕೊಲುಗಳ ಮೂಲಕ ಹಲಗೆಯ ನಾದಕ್ಕೆ ತಕ್ಕಂತೆ ಹೆಜ್ಜೆ ಕುಣಿತ ಬಲು ಜೊರು,ಮನಸ್ಸಿಗೆ ಆನಮದ.ಈಗಿನ ಟಿವಿ, ಮೊಬೈಲ್ ಭರಾಟೆಯಲ್ಲಿ ಗತವೈಭವ ಸಾರುವ ನಮ್ಮ ಶ್ರೀಮಂತ ಪರಂಪರೆ ಉಳಿಸುವ ಬೆಳೆಸುವ ಕಾರ್ಯ ಮೊಹರಮ್ ಹಬ್ಬದ ವೇಳೆಯಲ್ಲಿ ಹಾಲಾಪೂರಿನ ಮುಸ್ಲಿಂ ಮತ್ತು ಸರ್ವಜನಾಂಗದ ಬಾಂಧವರು ಸೇರಿ ಹಬ್ಬ ಆಚರಿಸುವುದು ಹೆಮ್ಮೆಯ ಸಂಗತಿ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

### ಹಿಂದೂ-ಮುಸ್ಲಿಂರ ಭಾವೈಕ್ಯತೆಯ ಸಂಕೇತ ಮೊಹರಂ ಕೊನೆ ದಿನದಂದು ಪೀರಲು ದೇವರುಗಳ ಅದ್ದೂರಿ ಮೆರವಣಿಗೆ :

## ಭವ್ಯ ಮೆರವಣಿಗೆಯೊಂದಿಗೆ ವಿಸರ್ಜನೆ : ಹತ್ತು ದಿನಗಳ ಸಂಭ್ರಮದ ಮೋಹರಂಗೆ ತೆರೆ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ: ಹಿಂದೂ-ಮುಸ್ಲಿಂರ ಭಾವೈಕ್ಯತೆಯ ಹಬ್ಬವಾಗಿರುವ ಮೊಹರಂ ಹಬ್ಬವನ್ನು ಕಂಪ್ಲಿ ತಾಲೂಕಿನಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಿ ಭಾನುವಾರ ಸಂಜೆ ಪೀರಲು (ಪಂಜಾ) ದೇವರುಗಳ ಮೆರವಣಿಗೆ ವಿಜೃಂಭಣೆಯಿಂದ ಮಾಡುವ ಮೂಲಕ ಹತ್ತು ದಿನಗಳ ಮೋಹರಂ ಹಬ್ಬಕ್ಕೆ ಅಂತಿಮ ತೆರೆ ಎಳೆಯಲಾಯಿತು.**

ಪಟ್ಟಣ ಹಾಗೂ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳು ಸೇರಿದಂತೆ ಎಲ್ಲೆಡೆ ಮೊಹರಂ ಹಬ್ಬದ ಸಡಗರ ಮನೆ ಮಾಡಿತ್ತು, ವಿವಿಧೆಡೆ ಹಿಂದೂ-ಮುಸ್ಲಿಂರು ಜೊತೆಯಾಗಿ ಅಲಾಯಿ ದೇವರನ್ನು (ಪಂಜಾ) ಪ್ರತಿಷ್ಠಾಪಿಸಿದ್ದರು. ಸಕ್ಕರೆ, ಬೆಲ್ಲ ಸಮರ್ಪಿಸಿ ಪೂಜೆ ಸಲ್ಲಿಸಿದರು. ಮೊಹರಂ ಹಬ್ಬದಲ್ಲಿ ಹುಲಿಗಳ ಆರ್ಭಟ ಜೋರಾಗಿತ್ತು. ಮೊಹರಂ ಹಬ್ಬದ ನಿಮಿತ್ಯ ಭಕ್ತರು ಬೇಡಿಕೆ ಪೂರೈಯಿಸಿಕೊಳ್ಳಲು ದೇವರಲ್ಲಿ ಹರಕೆ ತೀರಿಸಲು ಹುಲಿ ವೇಷವನ್ನು ತೊಟ್ಟು, ದೇವರ ಮುಂದೆ ಹುಲಿ ನೃತ್ಯವಾಡುತ್ತಾ ಹರಕೆ ತೀರಿಸಿದರು. ಕತಲ್ ರಾತ್ರಿ ಪ್ರಯುಕ್ತ ಕತ್ತಲ ರಾತ್ರಿ ಶುಕ್ರವಾರ ಬೆಳಗಿನ ಜಾವದಲ್ಲಿ ದೇವರುಗಳನ್ನು ಎದ್ದೇಳಿಸಿ, ಅಗ್ನಿಕೆಂಡದಲ್ಲಿ ಹಾಯ್ದು ನಂತರ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಮರಳಿ ಮಸೀದಿಗಳಲ್ಲಿ ಕೂರಿಸಲಾಯಿತು. ಮೆರವಣಿಗೆ ಸಂದರ್ಭದಲ್ಲಿ ಭಕ್ತರು ಪೀರಲು ದೇವರುಗಳಿಗೆ ನೀರೆರೆದು ಸಕ್ಕರೆ ಓದಿಸಿ ದರ್ಶನ ಪಡೆದುಕೊಂಡರು. ಹಲಗೆ ನಾದಕ್ಕೆ ಪೀರಲು ದೇವರುಗಳು ಸಹ ಹೆಜ್ಜೆ ಹಾಕುತ್ತಿರುವುದು ಕಂಡು ಬಂತು.

ಮೊದರಂ ಕೊನೆ ದಿನವಾದ ಶುಕ್ರವಾರ ಸಂಜೆ ಪೀರಲು ದೇವರುಗಳ ಮೆರವಣಿಗೆ ಕಂಪ್ಲಿ ಪಟ್ಟಣ, ಕೋಟೆಯಲ್ಲಿ ಅದ್ದೂರಿಯಾಗಿ ಹಾಗೂ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಾದ ಸಣಾಪುರ, ನಂ.10 ಮುದ್ದಾಪುರ, ರಾಮಸಾಗರ, ದೇವಸಮುದ್ರ, ಮೆಟ್ರಿ, ದೇವಲಾಪುರ, ಹಂಪಾದೇವನಹಳ್ಳಿ, ಸುಗ್ಗೇನಹಳ್ಳಿ, ನೆಲ್ಲುಡಿ, ಎಮ್ಮಿಗನೂರು ಸೇರಿದಂತೆ ಗ್ರಾಮಗಳಲ್ಲಿ ವಿಜೃಂಭಣೆಯಿಂದ ಜರುಗಿತು. ಹಿಂದೂ-ಮುಸ್ಲಿಂರು ಭಾವೈಕತೆ ಸಂಕೇತವಾಗಿರುವ ಮೊಹರಂ ಹಬ್ಬದಲ್ಲಿ ಪೀರಲು ದೇವರುಗಳ ಶುಭಾಷಯ ವಿನಿಮಯ ಮಾಡಿಕೊಳ್ಳುವ ಸಂದರ್ಭದಲ್ಲಿ ಭಕ್ತರು ದೇವರ ಮೇಲೆ ಮಂಡಾಳು ಎಸೆದು ಪುನೀತರಾದರು. ಮತ್ತು ನಾಡಿನಲ್ಲಿ ಉತ್ತಮ ಮಳೆ, ಬೆಳೆ ಆಗಲೆಂದು ಪ್ರಾರ್ಥಿಸಿದರು. ಈ ಹಬ್ಬವು ಮುಸ್ಲಿಂ ಸಮುದಾದ ದುಖದ ಹಬ್ಬವಾದರೂ ಸಹಿತ ಹಿಂದೂಗಳ ಸಂಭ್ರಮದಿಂದ ಆಚರಿಸುತ್ತಾರೆ. ಪೀರಲ ದೇವರು( ಪಂಜಾ)ಗಳಿಗೆ ಹಿಂದೂ ದೇವರಾದ ಬೆಳ್ಳಿ ಹಾಗೂ ಚಿನ್ನದ ನಾಗಪ್ಪ ವಿಗ್ರಹಗಳಿಂದ ಅಲಂಕರಿಸಿರುತ್ತಾರೆ.

ನಂತರ ಹತ್ತಿರದ ಕಾಲುವೆ ಹಾಗೂ ಇತರೆ ಕಡೆಗಳಲ್ಲಿ ತೆರಳಿ ವಿಸರ್ಜನೆಗೊಂಡ ನಂತರ ಮೊಹರಂ ಹಬ್ಬದ ಸಂಭ್ರಮಕ್ಕೆ ತೆರೆ ಬಿತ್ತು. ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ರಾತ್ರಿ ವೇಳೆ ಹಬ್ಬ ಮುಕ್ತಾಯವಾದರೂ ಸಹಿತ ಪಟ್ಟಣದಲ್ಲಿ ಮಾತ್ರ ರಾತ್ರಿಯವರೆಗೂ ಪೀರಲ ದೇವರುಗಳ ಮೆರವಣಿಗೆ ನಡೆದಿತ್ತು. ಚಿಕ್ಕಜಂತಕಲ್ : ತಾಲೂಕು ಸಮೀಪದ ಚಿಕ್ಕಜಂತಕಲ್ ಗ್ತಾಮದಲ್ಲಿ ಮೊಹರಂ ಹಬ್ಬದ ಪೀರಲು ದೇವರುಗಳ ಭವ್ಯ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು. ನಂತರ ಗ್ರಾಮದಲ್ಲಿ ತಮಟೆ ನಾದ, ಯುವಕರ ಕುಣಿತ, ಹೀಗೆ ಮೆರವಣಿಗೆ ಮೂಲಕ ಪೀರಲು ದೇವರ ವಿಸರ್ಜನೆ ಮೂಲಕ ಹಬ್ಬಕ್ಕೆ ತೆರೆ ಎಳೆಯಲಾಯಿತು.



# ರಾಯಚೂರು ಜಿಲ್ಲೆಯಲ್ಲಿ 2,60,002 ಮಕ್ಕಳಿಗೆ ಲಸಿಕೆ ಹಾಕಲು ಸಕಲ ಸಿದ್ದತೆ ಮಾಡಿಕೊಳ್ಳಲಾಗಿದೆ:ಡಾ ಸುರೇಂದ್ರ ಬಾಬು

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಭವಿಷ್ಯದಲ್ಲಿ ಮಕ್ಕಳಲ್ಲಿ ಶಾಶ್ವತ ಅಂಗವಿಕಲತೆ ಉಂಟು ಮಾಡುವ 'ಪೋಲಿಯೋ ಮೈಲಿಟಿಸ್' ವೈರಸ್ ನಿಯಂತ್ರಣಕ್ಕಾಗಿ 1995 ರಿಂದ ಭಾರತ ಸರಕಾರವು ಅಭಿಯಾನದ ರೂಪದಲ್ಲಿ ಹಮ್ಮಿಕೊಳ್ಳುತ್ತಾ ಬರಲಾಗಿರುವ "ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ'ವು ಈ ವರ್ಷ ಜೂನ್ 28 ರ ಭಾನುವಾರದಂದು ಜಿಲ್ಲಾದ್ಯಂತ ಜರುಗಲಿದ್ದು ಪಾಲಕರು ಹತ್ತಿರದ ಬೂತ್‌ಗಳಲ್ಲಿ ಲಸಿಕೆ ಹಾಕಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಸುರೇಂದ್ರಬಾಬು ಪತ್ರಿಕಾ ಪ್ರಕಟಣೆಯ ಮೂಲಕ ಮನವಿ ಮಾಡಿದ್ದಾರೆ.**

ರಾಯಚೂರು ಜಿಲ್ಲೆಯ ಲಸಿಕಾ ಕಾರ್ಯಕ್ರಮದ ಒಂದು ನೋಟ: ರಾಯಚೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ನಗರ ಗ್ರಾಮೀಣ ಭಾಗದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರವರ ಮಾರ್ಗದರ್ಶನದಲ್ಲಿ ಸಕಲ ಸಿದ್ದತೆ ಮಾಡಿಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಹುಟ್ಟಿನಿಂದ 5 ವರ್ಷದೊಳಗಿನ ಒಟ್ಟು 2,60,002 ಮಕ್ಕಳಿಗೆ ಲಸಿಕೆ ಹಾಕುವ ಗುರಿಯೊಂದಿಗೆ 3,29,000 ಡೋಸ್ ಲಸಿಕೆ ಸಿದ್ದವಾಗಿಟ್ಟು ಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಒಟ್ಟು 450732 ಮನೆಗಳ ಬೇಟಿಯ ಗುರಿ ಇದ್ದು, ಇದಕ್ಕಾಗಿ 1176 ಮನೆ ಭೇಟಿ ತಂಡಗಳು, 52 ಟ್ರಾನ್ಸಿಟ್ ತಂಡಗಳು ಹಾಗೂ 32 ಸಂಚಾರಿ ತಂಡಗಳು ಸೇರಿದಂತೆ ಒಟ್ಟು 1260 ತಂಡಗಳನ್ನು ನಿಯೋಜಿಸಲಾಗಿದ್ದು, ಒಟ್ಟು 2530 ಲಸಿಕಾ ಕಾರ್ಯಕರ್ತರು, 248 ಮೇಲ್ವಿಚಾರಕರು ಮತ್ತು 05 ತಾಲ್ಲೂಕುಗಳಿಗೆ ಉಸ್ತುವಾರಿ ಅಧಿಕಾರಿಗಳು ಕಾರ್ಯನಿರ್ವಹಿಸಲಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 827 ಕ್ಲಿಷ್ಟಕರ ಸ್ಥಳಗಳನ್ನು ಗುರುತಿಸಲಾಗಿದೆ. ಅಲ್ಲದೆ ಹಾಗೂ ಮನೆ ಬೇಟಿಯೊಂದಿಗೆ ಬಸ್ ನಿಲ್ದಾಣ, ರೈಲು ನಿಲ್ದಾಣ ಮತ್ತು ಸಂತೆ ಹಾಗೂ ಮಾರುಕಟ್ಟೆಗಳಲ್ಲಿ ನಿರಂತರವಾಗಿ ಲಸಿಕೆ ಹಾಕಲು ಇಲಾಖೆಯ ಸಿಬ್ಬಂದಿ ಹಾಗೂ ರಿಮ್ಸ್, ಎಸ್‌ಕೆಇ ಹಾಗೂ ನಂದನಿ ನರ್ಸಿಂಗ್ ಕಾಲೇಜು, ನವೋದಯ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ತಾಲೂಕಾ ಕೇಂದ್ರಗಳಲ್ಲಿ ಸ್ಥಳಿಯ ನರ್ಸಿಂಗ್ ಕಾಲೇಜು ವಿಧ್ಯಾರ್ಥಿಗಳು, ಅಗತ್ಯವಿರುವಡೆ ಅಂಗನವಾಡಿ ಕಾರ್ಯಕರ್ತೆಯರು ಲಸಿಕಾ ಕಾರ್ಯದಲ್ಲಿ ಭಾಗವಹಿಸಲು ಸಿದ್ದತೆ ಮಾಡಿಕೊಳ್ಳಲಾಗಿದೆ.

ಪ್ರೀಆ ಯಕ್ಟಿವಿಟಿ: ಈಗಾಗಲೆ ಜಿಲ್ಲೆಯ ಅಂಗನವಾಡಿ, ನರ್ಸರಿ, ಮೊಂಟೆಸ್ಸರಿ, ಶಿಶುವಿಹಾಗಳಗಲ್ಲಿ ದಿನಾಂಕ 23,24,25 ರಂದು



ಲಸಿಕೆ ಹಾಕಿ ನಿಗದಿತ ಗುರಿ ತಲುಪಲು ಶ್ರಮಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಜಾಗೃತಿಗಾಗಿ ನಿರಂತರ :ಜಾಗೃತಿಗಾಗಿ ಶಾಲಾ ಮಕ್ಕಳಿಂದ ಜಾಥಾ, ಪ್ರಮುಖ ಸ್ಥಳಗಳಲ್ಲಿ ಪ್ಲೆಕ್ಸ್ ಅಳವಡಿಕೆ, ತ್ಯಾಜ್ಯ ವಿಲೇವಾರಿ ವಾಹನಗಳು ಆಟೋಗಳ ಮೂಲಕ ಜಿಂಗಲ್ಸ್‌ಗಳು, ಟಾಂಟಾಂ, ಸಾಮಾಜಿಕ ಜಾಲತಾಣಗಳ ಮೂಲಕ ರೀಲ್ಸ್, ಸಂದೇಶಗಳನ್ನು ನಿರಂತರವಾಗಿ ಬಿತ್ತರಿಸಲಾಗುತ್ತಿದೆ. ಕ್ಯೂ ಆರ್‌ಕೋಡ್ ಬಳಕೆ ನಗರ ಪ್ರದೇಶಗಳ ಬೂತ್ ಗುರ್ತಿಸಲು ಕ್ಯೂ ಆರ್ ಕೋಡ್‌ನ್ನು ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಬಹುದಾಗಿದೆ.

ಜೂನ 28 ರಂದು ವಿಧ್ಯುಕ್ತವಾಗಿ ಚಾಲನೆಗೆ ಸಿದ್ದತೆ: ಅಲ್ಲದೆ ಜಿಲ್ಲಾ ಮಟ್ಟದಲ್ಲಿ ಮಾನ್ಯ ಶಾಸಕರು, ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಪಂ, ಮಹಾನಗರಪಾಲಿಕೆಯ ಆಯುಕ್ತರು ಹಾಗೂ ಗಣ್ಯರು ರಾಯಚೂರು ನಗರದ ಪಿ.ಎಮ್.ಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಇಬಿ ಕಾಲೋನಿಯಲ್ಲಿ ಹಾಗೂ ಜಿಲ್ಲೆಯ ಅಯಾ ತಾಲೂಕುಗಳಲ್ಲಿ ಮಾನ್ಯ ಶಾಸಕರು ಹಾಗೂ ಜನಪ್ರತಿನಿಧಿಗಳು, ಗಣ್ಯರು ಭಾಗವಹಿಸಿ ವಿಧ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.

ಭಾರತ ಪೋಲಿಯೋ ಮುಕ್ತ, ಆದರೆ ಜಾಗ್ರತೆ ಅಗತ್ಯ: ದೇಶದಲ್ಲಿ ಕೊನೆಯ ಪೋಲಿಯೋ ಪ್ರಕರಣವು 2011ರ ಜನವರಿ 13 ರಂದು ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯಲ್ಲಿ ವರದಿಯಾಗಿತ್ತು. ಅದಾದ ಬಳಿಕ ಯಾವುದೇ ಹೊಸ ಪ್ರಕರಣಗಳು ಕಂಡುಬಂದಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು 2014 ರ ಫೆಬ್ರವರಿ 11ರಂದು ಭಾರತವನ್ನು 'ಪೋಲಿಯೋ ಮುಕ್ತ ರಾಷ್ಟ್ರ' ಎಂದು ಘೋಷಿಸಿದೆ. ಆದರೆ, ಭಾರತವನ್ನು ನಿರಂತರವಾಗಿ ಪೋಲಿಯೋ ಮುಕ್ತವಾಗಿಡಲು ಹಾಗೂ ಪೋಲಿಯೊ ಮೇಲಿನ ಗೆಲುವನ್ನು ಮುಂದುವರೆಸಲು ಎಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳಾದ ಡಾ. ನಂದಿತಾ ಎಮ್ ಎನ್, ಅವರು ಮಾಹಿತಿ ನೀಡಿ ಪೋಲಿಯೋ ವೈರಸ್‌ನಲ್ಲಿ 3 ವಿಧಗಳಿದ್ದು, ಅದರಲ್ಲಿ ಟೈಪ್ 2 ವೈರಸ್ ಈಗಾಗಲೇ ನಿರ್ಮೂಲನೆಯಾಗಿದೆ. ಆದರೆ ಟೈಪ್ 1 ಹಾಗೂ ಟೈಪ್ 3 ವೈರಸ್ ಪ್ರಕರಣಗಳು ಇಂದಿಗೂ ನೆರೆಯ ಪಾಕಿಸ್ತಾನ ಹಾಗೂ ಅಫಘಾನಿಸ್ಥಾನಗಳಲ್ಲಿ ಕಂಡು ಬರುತ್ತಿರುವುದರಿಂದ ನಮ್ಮ ದೇಶದಲ್ಲಿ ಮುಂಜಾಗ್ರತಾ ಕ್ರಮವಾಗಿ ಟೈಪ್ 1, ಟೈಪ್ 3 ವೈರಸ್ ತಡೆಗಾಗಿ ಹಾಗೂ ಪ್ರಕರಣಗಳು ಬರದಂತೆ ಬೈವೆಲೆಂಟ್ ಸಿರೊಟೈಪ್ ಲಸಿಕೆಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈಗಾಗಲೆ ವಲಸೆ ಪ್ರದೇಶಗಳು, ಕೈಗಾರಿಕಾ ವಲಯಗಳು, ಇಟ್ಟಿಗೆ ಭಟ್ಟಿಗಳು, ಅಲೆಮಾರಿ ಕುರಿ ಸಾಕಾಣಿಕೆದಾರರ ತಾತ್ಕಾಲಿಕ ನಿವಾಸಿಗಳು, ಹಟ್ಟಿ, ತಾಂಡಾ, ತೋಟದ ಮನೆಗಳು ಹಾಗೂ ಕಟ್ಟಡ ನಿರ್ಮಾಣದ ಸ್ಥಳಗಳಲ್ಲಿರುವ ಮಕ್ಕಳನ್ನು ಗುರುತಿಸಿ ಲಸಿಕೆ ಹಾಕಲು ಕ್ರಿಯಾ ಯೋಜನೆಯಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಈ ಹಿನ್ನಲೆಯಲ್ಲಿ ಜಿಲ್ಲೆಯ ಎಲ್ಲಾ ಸಾರ್ವಜನಿಕರು ಹಾಗೂ ಪಾಲಕರು ತಮ್ಮ ಹುಟ್ಟಿನಿಂದ 5 ವರ್ಷದೊಳಗಿನ ಎಲ್ಲಾ ಮಕ್ಕಳನ್ನು ತಪ್ಪದೇ ಹತ್ತಿರದ ಪೋಲಿಯೋ ಬೂತ್‌ಗಳಿಗೆ ಕರೆತಂದು, ಜೂನ್ 28. 2026 ರ ಭಾನುವಾರದಂದು 'ಎರಡು ಹನಿ' ಪೋಲಿಯೋ ಲಸಿಕೆ ಕೊಡಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ನೇಮಕಾತಿ ಪ್ರಕಟಣೆ

**KEA ನೇಮಕಾತಿ 2026 – 1600 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 22, 2026**

ಏಇಂ ನೇಮಕಾತಿ 2026: 1600 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜೂನ್ 2026 ರ ಏಇಂ ಅಧಿಕೃತ ಅಧಿಸೂಚನೆಯ ಮೂಲಕ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 22–ಜುಲೈ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22–06–2026
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22–ಜುಲೈ–2026
ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 24–07–2026
ಪರೀಕ್ಷಾ ದಿನಾಂಕ: 06ನೇ–ಸೆಪ್ಟೆಂಬರ್–2026
ಅಧಿಕೃತ ವೆಬ್‌ಸೈಟ್: cetonline.karnataka.gov.in

## ಶಾಸಕ ನಾಡಗೌಡರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕಾಂಗ್ರೆಸ್ ಪಕ್ಷದ ಜಿಲ್ಲೆಯ ಹಿರಿಯ ಮುತ್ಸದ್ದಿ ರಾಜಕಾರಣಿ ಮುದ್ದೇಬಿಹಾಳ ಮತಕ್ಷೇತ್ರದಲ್ಲಿ 6 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ.ಎಸ್.ನಾಡಗೌಡ(ಅಪ್ಪಾಜಿ) ಇವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಯುವ ಮುಖಂಡ ಗೋಪಾಲ ಕಟ್ಟಿಮನಿ ವರಿಷ್ಠರಲ್ಲಿ ಒತ್ತಾಯಿಸಿದ್ದಾರೆ.**



ಪತ್ರಿಕೆಯೊಂದಿಗೆ ಮಾತನಾಡಿದ ಅವರು ಉತ್ತರ ಕರ್ನಾಟಕ ಭಾಗದ ಲಿಂಗಾಯತ ರೆಡ್ಡಿ ಸಮುದಾಯದ ಅತ್ಯಂತ ಪ್ರಭಾವಿ ನಾಯಕರಾದ ಅಪ್ಪಾಜಿ ನಾಡಗೌಡರು ಈ ಹಿಂದೆ ಎಸ್‌ಎಂ ಕೃಷ್ಣ ಅವರ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿದ್ದ ಸಮಯದಲ್ಲಿ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ನಾಡಗೌಡರು ಅಪಾರ ಅನುಭವ ಹೊಂದಿದ ರಾಜಕಾರಣಿ, ಕೇಂದ್ರ ಹಾಗೂ ರಾಜ್ಯದ ಎಲ್ಲ ಹಿರಿಯ ನಾಯಕರೊಂದಿಗೆ ಅನ್ಯೂನ್ಯವಾದ ಸಂಬಂಧವನ್ನು ಹೊಂದಿದ ಎಲ್ಲರಿಂದಲೂ ಗೌರವಿಸಲ್ಪಡುವ ವ್ಯಕ್ತಿಯಾಗಿದ್ದಾರೆ. 2023ರ ಚುನಾವಣೆ ಹೊಸ್ತಿಲಿನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರು ಈ ಭಾಗದಲ್ಲಿ ಪ್ರಚಾರಕ್ಕೆ ಬಂದಾಗ ಅಪ್ಪಾಜಿ ನಾಡಗೌಡರನ್ನು ಮುಂದಿನ ಸರ್ಕಾರದಲ್ಲಿ ಸಚಿವರನ್ನಾಗಿ ಮಾಡುತ್ತೇವೆ ಎಂದು ಭರವಸೆ ನೀಡಿದ್ದರು ಆದರೆ ಅದು ಸಾಧ್ಯವಾಗಲಿಲ್ಲ ಆಗಲೂ ಕ್ಷೇತ್ರದ ಜನರಿಗೆ ಭಾರಿ ನಿರಾಶೆಯಾಗಿತ್ತು. ಇದೀಗ ಸಿಎಂ ಡಿಕೆ ಶಿವಕುಮಾರ ಅವರ ಮೊದಲ ಹಂತದ ಸಚಿವ ಸಂಪುಟದಲ್ಲಿಯೂ ಅವರನ್ನು ಆಯ್ಕೆ ಮಾಡಿಲ್ಲ ಇನ್ನೂ ಎರಡನೇ ಹಂತದಲ್ಲಾದರೂ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಇಲ್ಲದೆ ಹೋದಲ್ಲಿ ತಾಲ್ಲೂಕಿನಾದ್ಯಂತ ದೊಡ್ಡ ಮಟ್ಟದ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಇದಕ್ಕೆ ವರಿಷ್ಠರು ಅವಕಾಶ ಕೊಡಬಾರದು ಎಂದು ಕಟ್ಟಿಮನಿ ಅವರು ತಿಳಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

**Early Childhood Care and Education**

ಆರಂಭಿಕ ಬಾಲ್ಯ ಶಿಕ್ಷಣ (ECE) ಅಥವಾ ಇಅಅಇ (Early Childhood Care and Education) ಕೋರ್ಸ್‌ಗಳು ೦ ರಿಂದ ೬ ವರ್ಷದ ಮಕ್ಕಳಿಗೆ ಬೋಧನೆ ಮತ್ತು ಆರೈಕೆ ಮಾಡುವ ತರಬೇತಿಯನ್ನು ನೀಡುತ್ತವೆ. ಈ ಕೋರ್ಸ್‌ಗಳು ಪ್ರಮಾಣಪತ್ರ ಅಥವಾ ಡಿಪ್ಲೊಮಾ ರೂಪದಲ್ಲಿ ಲಭ್ಯವಿದ್ದು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕಲಿಸಲಾಗುತ್ತದೆ. ಪ್ರೀ–ಸ್ಕೂಲ್ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು ಹಾಗೂ ಡೇ–ಕೇರ್ ವೃತ್ತಿಪರರಾಗಲು ಬಯಸುವವರಿಗೆ ಇದು ಅತ್ಯುತ್ತಮ ಕೋರ್ಸ್ ಆಗಿದೆ. ಕೋರ್ಸ್ ವಿವರಗಳು: ಅವಧಿ: ಪ್ರಮಾಣಪತ್ರ ಕೋರ್ಸ್‌ಗಳಿಗೆ ೬ ತಿಂಗಳುಗಳಿಂದ, ಡಿಪ್ಲೊಮಾ ಕೋರ್ಸ್‌ಗಳಿಗೆ ೧ ವರ್ಷವರೆಗೆ. ಅರ್ಹತೆ: ಕನಿಷ್ಠ ೧೦+೨ (ಪಿಯುಸಿ) ಪಾಸ್ ಅಗತ್ಯ. ಕೆಲವು ಪ್ರಮಾಣಪತ್ರ ಕೋರ್ಸ್‌ಗಳಿಗೆ ೧೦ನೇ ತರಗತಿ ಪಾಸ್ ಸಾಕಾಗಬಹುದು. ಮೇಲಿನ ವಯೋಮಿತಿ ಇಲ್ಲ. ಭಾಷೆ: ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಲಭ್ಯ. ಮುಖ್ಯ ವಿಷಯಗಳು: ಮಕ್ಕಳ ಮನೋವಿಜ್ಞಾನ ಮತ್ತು ಬೆಳವಣಿಗೆ ಆಟ ಆಧಾರಿತ ಕಲಿಕೆ ಪ್ರಾಥಮಿಕ ಓದು, ಬರಹ ಮತ್ತು ಗಣಿತ ಮಕ್ಕಳ ಆರೋಗ್ಯ, ಸುರಕ್ಷತೆ ಮತ್ತು ಪೌಷ್ಟಿಕತೆ ತರಗತಿ ನಿರ್ವಹಣೆ ಮತ್ತು ಬೋಧನಾ ವಿಧಾನಗಳು ಕರ್ನಾಟಕದಲ್ಲಿ ಅಧ್ಯಯನಕ್ಕೆ ಲಭ್ಯ ಸ್ಥಳಗಳು : ಬೆಂಗಳೂರು, ಧಾರವಾಡ ಸೇರಿದಂತೆ ಕರ್ನಾಟಕದ ಹಲವೆಡೆ ಹಾಗೂ ಆನ್‌ಲೈನ್ ಮೂಲಕ ಈ ಕೋರ್ಸ್‌ಗಳು ಲಭ್ಯ. ವಿಶ್ವವಿದ್ಯಾಲಯಗಳು, ತರಬೇತಿ ಸಂಸ್ಥೆಗಳು, ಮಹಿಳಾ ಪಾಲಿಟೆಕ್ನಿಕ್‌ಗಳು ಹಾಗೂ ಸ್ಥಳೀಯ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ಪ್ರವೇಶ ಪಡೆಯಬಹುದು. ಉದ್ಯೋಗಾವಕಾಶಗಳು:ಪ್ರೀ–ಪ್ರೈಮರಿ / ನರ್ಸರಿ ಶಿಕ್ಷಕ/ಶಿಕ್ಷಕಿ ಅಂಗನವಾಡಿ ಕಾರ್ಯಕರ್ತೆ / ಮೇಲ್ವಿಚಾರಕಿ ಡೇ–ಕೇರ್ ಕೇಂದ್ರ ಸಿಬ್ಬಂದಿ / ವ್ಯವಸ್ಥಾಪಕಿ ಆಕ್ಟಿವಿಟಿ ಅಥವಾ ಫೋನಿಕ್ಸ್ ತರಬೇತುದಾರ ಈ ಕೋರ್ಸ್ ಪೂರ್ಣಗೊಳಿಸಿದ ನಂತರ ಮಕ್ಕಳ ಶಿಕ್ಷಣ ಮತ್ತು ಆರೈಕೆ ಕ್ಷೇತ್ರದಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಬಹುದು.

# ಶಾಸಕ ಗಣೇಶಗೆ ಸಚಿವ ಸ್ಥಾನ ನೀಡಲೇಬೇಕು : ಲೊಡ್ಡು ಹೊನ್ನೂರವಲಿ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳೊಂದಿಗೆ ಅಚ್ಚುಮೆಚ್ಚಿನ ನಾಯಕರಾಗಿರುವ ಶಾಸಕ ಜೆ.ಎನ್.ಗಣೇಶಗೆ ಇಡೀ ರಾಜ್ಯದ ಅಭಿವೃದ್ಧಿ ದೃಷ್ಠಿಯಿಂದ ಸಚಿವ ಸ್ಥಾನ ನೀಡಲೇಬೇಕು ಎಂದು ಪುರಸಭೆ ಮಾಜಿ ಸದಸ್ಯ ಲೊಡ್ಡು ಹೊನ್ನೂವರಲಿ ಒತ್ತಾಯಿಸಿದರು.**



ಪಟ್ಟಣದ ಗಂಗಾವತಿ ರಸ್ತೆಯ ಹಜರತ್ ಬಡೇಸಾಹೇಬ್ ದರ್ಗಾದಲ್ಲಿ ಕಂಪ್ಲಿ–ಕೋಟೆ ಯುವ ನಾಯಕ ಇಮ್ರಾನ್ ಬಳಗದ ಸಹಕಾರದೊಂದಿಗೆ ಶುಕ್ರವಾರ ಹಮ್ಮಿಕೊಂಡಿದ್ದ ಶಾಸಕ ಜೆ.ಎನ್.ಗಣೇಶ ಅವರ ಹೆಸರಿನಲ್ಲಿ ವಿಶೇಷ ಪೂಜೆಯೊಂದಿಗೆ ಪ್ರಾರ್ಥನೆ ಸಲ್ಲಿಸಿ, ನಂತರ ಭಕ್ತರಿಗೆ ಅನ್ನಸಂತಾರ್ಪಣೆ ವಿತರಿಸಿ ಮಾತನಾಡಿ, ರೈತ, ಕಾರ್ಮಿಕರ ಸೇರಿದಂತೆ ಕ್ಷೇತ್ರದ ಜನರ ಸೇವೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ರಸ್ತೆ, ಕುಡಿಯುವ ನೀರು, ಬೀದಿ ದೀಪ ಸೇರಿ ನಾನಾ ಅಭಿವೃದ್ಧಿ ಕಾರ್ಯಗಳನ್ನು ಸಾಕಷ್ಟು ಅನುದಾನದಲ್ಲಿ ಕೆಲಸ ಮಾಡಿದ್ದಾರೆ. ನಿರಂತರವಾಗಿ ಜನರ ಮಧ್ಯದಲ್ಲಿದ್ದು, ಜನರಿಗೋಸ್ಕರ ಸೇವೆ ಮಾಡುವ ಏಕೈಕ ನಾಯಕ ಶಾಸಕ ಜೆ.ಎನ್.ಗಣೇಶರಾಗಿದ್ದಾರೆ. ಆದ್ದರಿಂದ ಸಿಎಂ ಡಿ.ಕೆ.ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ವರಿಷ್ಠರು, ಹೈಕಮಾಂಡ್ ಹೆಚ್ಚಿನ ಮುತುವರ್ಜಿಯಿಂದ ಗಣೇಶಗೆ ಸಚಿವ ಸ್ಥಾನ ನೀಡಬೇಕು. ಇಲ್ಲವಾದಲ್ಲಿ ಬರುವ ದಿನದಲ್ಲಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದರು.

ಯುವ ನಾಯಕ ಇಮ್ರಾನ್ ಮಾತನಾಡಿ, ಜನ ಸೇವೆಯೇ ಜನಾರ್ದನ ಸೇವೆ ಎಂಬಂತೆ ಪ್ರತಿ ಹಂತದಲ್ಲಿ ಜನಪರ ಸೇವೆ ಸಲ್ಲಿಸುವ ಮೂಲಕ ಶಾಸಕ ಗಣೇಶ ಜನಮೆಚ್ಚಿನ ನಾಯಕರಾಗಿದ್ದಾರೆ. ಇಂತಹ ನಾಯಕ ಗಣೇಶಗೆ ಸಚಿವ ಸ್ಥಾನ ನೀಡಲೇಬೇಕು ಎಂದರು. ನಂತರ ಆಪ್ತ ಸಹಾಯಕ ಧನ್‌ರಾಜ್ ಮಾತನಾಡಿ, ಕಂಪ್ಲಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಮರಿಚಿಕೆಯಾಗಿದ್ದವು. ಇಂತಹ ಸಮಯದಲ್ಲಿ ಶಾಸಕರಾಗಿ ಹೊರಹೊಮ್ಮಿದ ದಿನದಿಂದಲೂ ಕಳೆದ ಏಳೆಂಟು ವರ್ಷದಲ್ಲಿ ಶಾಸಕ ಜೆ.ಎನ್. ಗಣೇಶ ಅವರು ಕಂಪ್ಲಿ ಕ್ಷೇತ್ರಕ್ಕೆ ರಾಜ್ಯವೇ ತಿರುಗಿ ನೋಡುವಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಈಗಾಗಲೇ ಕ್ಷೇತ್ರ ಸೇರಿದಂತೆ ಜಿಲ್ಲೆ, ರಾಜ್ಯ ಮಟ್ಟದಲ್ಲಿ ಅಭಿವೃದ್ಧಿ ಹರಿಕಾರ ಮತ್ತು ಜನರ ಆಪತ್ಬಾಂಧವ ಎಂಬ ಹೆಗ್ಗಳಿಕೆ ಪಡೆದಿದ್ದಾರೆ.

ನೂತನ ಸಿಎಂ ಆಗಿ ಡಿ.ಕೆ.ಶಿವಕುಮಾರ ಪದಗ್ರಹಣ ಮಾಡಿದ ಮೊದಲ ಸಚಿವ ಸಂಪುಟದಲ್ಲಿ ಕಂಪ್ಲಿ ಕ್ಷೇತ್ರದ ಶಾಸಕ ಜೆ.ಎನ್.ಗಣೇಶ ಇವರಿಗೆ ಸಚಿವ ಸ್ಥಾನ ಸಿಗುವ ಅಭಿಲಾಷೆಯನ್ನು ಹೊಂದಿದ್ದೇವು. ಆದರೆ, ಸಚಿವ ಸ್ಥಾನ ದೊರಕಿಲ್ಲ. ಆದ್ದರಿಂದ ಎರಡನೇ ಹಂತದ ಸಚಿವ ಸಂಪುಟದಲ್ಲಿ ಕಡ್ಡಾಯವಾಗಿ ಶಾಸಕ ಗಣೇಶ ಇವರಿಗೆ ಸಚಿವ ಸ್ಥಾನ ನೀಡಿದರೆ, ಕ್ಷೇತ್ರ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಜನಪರ ಸೇವೆ ಜೊತೆಗೆ ಅಭಿವೃದ್ಧಿ ಕಾರ್ಯಗಳೊಂದಿಗೆ ಇಡೀ ರಾಜ್ಯದಲ್ಲಿ ಮಾದರಿಯಾಗಲಿದ್ದಾರೆ ಎಂದರು. ನಂತರ ಪುರಸಭೆ ಮಾಜಿ ಅಧ್ಯಕ್ಷ ಭಟ್ಟ ಪ್ರಸಾದ್ ಅವರ ಜನ್ಮದಿನವನ್ನು ಕೇಕ್ ಕತ್ತರಿಸಿ, ಸಿಹಿ ಹಂಚುವ ಮೂಲಕ ವಿಜೃಂಭಣೆಯಿಂದ ಆಚರಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಇಮ್ರಾನ್, ಅಕ್ಕಿ ಜಿಲಾನ್, ಮೈನು, ಬೆಳಗೋಡ್ ಜಾವೀದ್, ಬಿ.ಬಾಷಾ, ಬಿ.ಹಸನ್, ಬಾಲಕೃಷ್ಣ, ಆದಿಶೇಷಯ್ಯ, ಶ್ರೀಧರ್ ಇದ್ದರು.

# "ರಾಜಾರೋಷವಾಗಿ ಅನ್ನಭಾಗ್ಯ ಪಡಿತರ ಅಕ್ಕಿ ಮಾರಾಟ"

ನೈಜ್ಯ ದೆಸೆ ನ್ಯೂಸ್

**ಸಿರವಾರ: ಬಡವರ ಹಸಿವು ನೀಗಿಸಲೆಂದು ಸರ್ಕಾರ ಉಚಿತವಾಗಿ ಅಕ್ಕಿಯನ್ನು ನೀಡುತ್ತಿದ್ದರೆ ಇತ್ತ ಅಂಗಡಿ ಮಾಲಿಕರು ಹಾಡುಹಗಲೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ ಅಂಗಡಿ ಮಾಲಿಕರ ಮೇಲೆ ಕ್ರಮಕೈಗೊಳಬೇಕು ಎಂದು ಸಾಮಾಜಿಕ ಕಾರ್ಯಕರ್ತ ಮಾರೇಪ್ಪ ನಾಯಕ ತಹಸೀಲ್ದಾರರಿಗೆ ಮನವಿ ಪತ್ರ ನೀಡುವ ಮೂಲಕ ಒತ್ತಾಯಿಸಿದ್ದಾರೆ.**





ತಾಲೂಕಿನ ಬಲ್ಲಟಗಿ ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ : 76 ಈ ಅಂಗಡಿಯು ಗ್ರಾಮದ ಒಂದೇ ನ್ಯಾಯಬೆಲೆ ಅಂಗಡಿಯಾಗಿರುವುದರಿಂದ ನಮ್ಮ ಗ್ರಾಮದಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದು, ಸದರಿ ನ್ಯಾಯಾಬೆಲೆ ಅಂಗಡಿ ಹೆಚ್ಚಿನ ಮಟ್ಟದ ಅಕ್ಕಿ ವಿತರಣೆ ಸರ್ಕಾರದಿಂದ ಬರುತ್ತದೆ. ಆದರೆ ಸದರಿ ಅಂಗಡಿಯ ಮಾಲಿಕರಾದಂತಹ ಕೆ.ಬಸನಗೌಡ ಇವರು ಜನರಿಗೆ ಸರಿಯಾದ ಮಟ್ಟದಲ್ಲಿ ಗ್ರಾಹಕರಿಗೆ ಅಕ್ಕಿಯನ್ನು ವಿತರಣೆ ಮಾಡುತ್ತಿಲ್ಲ.

ತಮ್ಮ ಗೋಧಾಮಲ್ಲಿ ಅರ್ಧದಷ್ಟು ಅಕ್ಕಿಯನ್ನು ಸ್ಟಾಕ್ ಮಾಡಿಕೊಂಡು ಜನರಿಗೆ ಅಲ್ಪ ಸ್ವಲ್ಪ ಮಟ್ಟದಲ್ಲಿ ಅಕ್ಕಿಯನ್ನು ನೀಡಿ ಉಳಿದ ಅಕ್ಕಿಯನ್ನು ಇವರುಗಳು ಜನರಿಗೆ ಗೊತ್ತಾಗದಂತೆ ಬೇರೆ ಬೇರೆ ಪಟ್ಟಣಗಳಲ್ಲಿನ ಅಂಗಡಿ ಮಾಲಿಕರಿಗೆ ಅಕ್ಕಿಯನ್ನು ಮಾರಾಟ ಮಾಡುತ್ತಿರುವುದು ವಿಡಿಯೋ ದೃಶ್ಯ ಮುಖಾಂತರ ಸೇರಿಹಿಡಿದಿದ್ದೆವೆ. ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ 76 ರ ಅಂಗಡಿ ಮಾಲಿಕರಾದ ಕೆ ಬಸನಗೌಡ ಇವರ ವಿರುದ್ದ ಕಾನೂನು ಕ್ರಮ ಕೈಗೊಂಡು ಇವರಿಗೆ ನೀಡಿರುವಂತಹ ನ್ಯಾಯಬೆಲೆ ಅಂಗಡಿಯ ಪರವಾನಿಗೆಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದ್ದಾರೆ.

# ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಹಾಯ ಕೇಂದ್ರ ಆರಂಭ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದಲ್ಲಿ ಶೀಘ್ರದಲ್ಲೇ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಪ್ರಕ್ರಿಯೆ ಆರಂಭವಾಗಲಿರುವ ಹಿನ್ನೆಲೆಯಲ್ಲಿ, ಯಾವುದೇ ಅರ್ಹ ಮತದಾರರು ಮತದಾನ ಹಕ್ಕಿನಿಂದ ವಂಚಿತರಾಗದಂತೆ ರಾಜ್ಯ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದೆ.**




ಮತದಾರರಿಗೆ ಅಗತ್ಯ ದಾಖಲೆಗಳು ಹಾಗೂ ಪ್ರಮಾಣಪತ್ರಗಳು ವಿಳಂಬವಿಲ್ಲದೆ ಸಕಾಲದಲ್ಲಿ ಲಭ್ಯವಾಗುವಂತೆ ಮಾಡಲು ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಶೇಷ ಸಹಾಯ ಕೇಂದ್ರಗಳನ್ನು ಆರಂಭಿಸಲು ಸರ್ಕಾರ ಆದೇಶ ಹೊರಡಿಸಿದೆ. ಚುನಾವಣಾ ಸಂದರ್ಭದಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ, ವಿಳಾಸ ಬದಲಾವಣೆ ಸೇರಿದಂತೆ ವಿವಿಧ ದಾಖಲೆಗಳ ಅಗತ್ಯ ಹೆಚ್ಚಾಗುವ ಕಾರಣ, ಸಾರ್ವಜನಿಕರಿಗೆ ಸುಲಭ ಸೇವೆ ಒದಗಿಸುವ ಉದ್ದೇಶದಿಂದ ಈ ಕ್ರಮ ಜಾರಿಗೊಳಿಸಲಾಗಿದೆ.

ಇದರಿಂದ ಗ್ರಾಮೀಣ ಪ್ರದೇಶದ ಜನರು ಸರ್ಕಾರಿ ಕಚೇರಿಗಳಿಗೆ ಅನಗತ್ಯ ಅಲೆದಾಟವಿಲ್ಲದೆ ತಮ್ಮ ಅಗತ್ಯ ದಾಖಲೆಗಳನ್ನು ಪಡೆಯಲು ಅನುಕೂಲವಾಗಲಿದೆ. ಸರ್ಕಾರದ ಆದೇಶದ ಪ್ರಕಾರ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಈ ಸಹಾಯ ಕೇಂದ್ರಗಳನ್ನು ಬಾಪೂಜಿ ಸೇವಾ ಕೇಂದ್ರದ ಡಾಟಾ ಎಂಟ್ರಿ ಆಪರೇಟರ್ ನಿರ್ವಹಿಸಲಿದ್ದಾರೆ. ಕೇಂದ್ರದ ಆಡಳಿತಾತ್ಮಕ ಉಸ್ತುವಾರಿ ಹಾಗೂ ಮೇಲ್ವಿಚಾರಣೆಯನ್ನು ಸಂಬಂಧಿತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (PDO) ವಹಿಸಲಿದ್ದಾರೆ.

ಈ ವ್ಯವಸ್ಥೆಯಿಂದ ಮತದಾರರ ಸೇವೆಗಳು ವೇಗವಾಗಿ ಜನರಿಗೆ ತಲುಪುವ ಜೊತೆಗೆ ಚುನಾವಣಾ ಪ್ರಕ್ರಿಯೆ ಇನ್ನಷ್ಟು ಪಾರದರ್ಶಕ ಮತ್ತು ಪರಿಣಾಮಕಾರಿಯಾಗಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಈ ಕುರಿತು ಅಧಿಕೃತ ಆದೇಶ ಹೊರಡಿಸಿದ್ದು, ರಾಜ್ಯಪಾಲರ ಆದೇಶಾನುಸಾರ ಜಾರಿಗೆ ತರಲಾಗಿದೆ.

# ಬಿ.ಗಣೇಕಲ್ ಮೊಹರಂ ಆಚರಣೆ: ಭಕ್ತಿ, ತ್ಯಾಗ ಮತ್ತು ಸಹೋದರತ್ವದ ಸಂಕೇತ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಜಾತಿಯ ಹಂಗಿಲ್ಲದೆ ಮನಕುಲ ಒಂದೇ ಎಂಬ ಸಂದೇಶ ಸಾರಿ ಸರ್ವಧರ್ಮಗಳ ಭಾವೈಕ್ಯದ ಕೊಂಡಿಯಾಗಿರುವ ಮೊಹರಂ ಆಚರಣೆ ಆದುನಿಕ ಯುಗದಲ್ಲೂ ಸ್ನೇಹ ಸಹೋದರತ್ವದ ಸಂಕೇತವಾಗಿ ಸರ್ವ ಧರ್ಮೀಯರು ಆಚರಿಸುವ ವಿಶಿಷ್ಟ ಹಬ್ಬವಾದ ಮೊಹರಂನ ಕೊನೆ ದಿನವನ್ನು ಬಹಳ ಅದ್ಧೂರಿಯಾಗಿ ಆಚರಿಸಿದರು .**



ಗ್ರಾಮೀಣ ಭಾಗದಲ್ಲಿ ಇದಕ್ಕೆ ಅಲಾಯಿ ಹಬ್ಬ ಅಂತಲೂ ಹೆಸರು. ಈ ಹಬ್ಬವನ್ನು ಉತ್ಸಾಹದಿಂದ ಆಚರಿಸುತ್ತಾರೆ. ಈ ಹಬ್ಬದಲ್ಲಿ ಚೆಣ್ಣರನ್ನು ನೋಡುವುದೇ ಮಜವಾಗಿರುತ್ತದೆ.ಐದು ದಿನಗಳ ಕಾಲ ಕೂರಿಸಲಾಗುವ ಅಲಾಯಿ ದೇವರಿಗೆ ಕುಣಿ ತೆಗೆದು ಅಗ್ನಿಕುಂಡ ಪ್ರವೇಶ ಮಾಡುತ್ತಾರೆ. ಭಕ್ತರು ದೇವರಿಗೆ ಹರಕೆ ತೀರಿಸಲೆಂದು ಬಾವಾ, ಫಕೀರರಾಗಿ ಕೈಯಲ್ಲಿ, ಕೊರಳಲ್ಲಿ ವಿವಿಧ ಬಗೆಯ ಲಾಡಿಗಳನ್ನು ಕಟ್ಟಿಕೊಳ್ಳುತ್ತಾರೆ. ಮೊಹರಂ ಅತಿ ಹೆಚ್ಚಾಗಿ ಹಿಂದೂಗಳ ನೇತೃತ್ವದಲ್ಲಿ ನಡೆಯುತ್ತದೆ. ದೇವರ ಕಾಯಕದಲ್ಲಿ ಎಲ್ಲ ಜಾತಿಗಳ ಮನೆತನಗಳಿಗೂ ಒಂದೊಂದು ಅಧಿಕೃತ ಸ್ಥಾನವಿದ್ದು ಹಲಗೆ ಬಾರಿಸುವ ಕಹಳೆ, ಊದುವ, ನೈವೇದ್ಯ ಸಲ್ಲಿಸುವ, ದಾರಿ ತೋರಿಸುವ, ಕೊಂಡ ಅಗೆಯುವ ಹೀಗೆ ಮುಂತಾದ ಕಾಯಕಗಳನ್ನು ಆಯಾ ಮನೆತನಗಳಿಗೆ ಹಂಚಲಾಗಿರುತ್ತದೆ.

ಹಬ್ಬದ ಕೊನೆಯ ದಿನ ಕಾಸಿಂಸಾಬು, ರಾಜಬಕ್ಷಾ ಅವರನ್ನು ಸ್ಮರಿಸುವುದಕ್ಕಾಗಿ ಪ್ರಮುಖ ಮಸಿದಿಯಿಂದ ಮೆರವಣಿಗೆ ಹೊರಟು ಗ್ರಾಮ ದೇವತೆಗಳಾದ ದ್ಯಾವಮ್ಮ, ದುರುಗಮ್ಮ ದೇವಸ್ಥಾನದ ಆವರಣದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮೆರವಣಿಗೆ ನಡೆಸುತ್ತಾ ಮಾನವೀಯತೆಗೆ ಗೌರವ ಕೊಡುವುದೇ ಮೊಹರಂ ಹಬ್ಬದ ವಿಶೇಷತೆ, ಎಂದು ಸಮಾಜಕ್ಕೆ ಸಂದೇಶ ಸಾರುವ ಮೂಲಕ ಊರ ದೇವರ ಬಾವಿ ಅದ್ದಬಾವಿಯಲ್ಲಿ ದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ದೇವರುಗಳಿಗೆ ಅಂತಿಮ ನಮನ ಸಲ್ಲಿಸಿ ಮೊಹರಂ ಕಾರ್ಯಕ್ರಮಕ್ಕೆ ವಿದಾಯ ಹೇಳಿ ಪ್ರತಿ ವರ್ಷವು ಕೂಡ ಇದೆ ರೀತಿಯಲ್ಲಿ ಶಾಂತಿಯುತವಾಗಿ ನಡೆಯಲಿ ಎಂದು ವಿದಾಯದ ಗೀತೆಗಳನ್ನು ಹಾಡುತ್ತ ಮರಳಿ ಮಸಿದಿ ಕಡೆ ಬರುತ್ತಾ ಮೊಹರಂ ಹಬ್ಬವು ಬಿ.ಗಣೇಕಲ್ ಗ್ರಾಮಸ್ಥರಿಂದ ಕಾರ್ಯಕ್ರಮ ಜರುಗಿತು.

## 72,186 ಹುದ್ದೆಗಳ ಭರ್ತಿಗೆ ಮುಂದಾಗಿರುವ ರಾಜ್ಯಸರ್ಕಾರದ ನಿರ್ಧಾರ ಸ್ವಾಗತಾರ್ಹ; ಕೂಡಲೇ ಅಧಿಸೂಚನೆ ಹೊರಡಿಸಿ.

# ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ, ಕರ್ನಾಟಕ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಜ್ಯ ಸರ್ಕಾರ 72,186 ಹುದ್ದೆಗಳ ಭರ್ತಿಗೆ ಮುಂದಾಗಿದ್ದು, 6 ತಿಂಗಳ ನಿಗದಿತ ಕಾಲಮಿತಿಯೊಳಗೆ ನೇಮಕಾತಿಗಳನ್ನು ಪೂರ್ಣಗೊಳಿಸಲು ಹಾಗೂ ಇದರ ಉಸ್ತುವಾರಿಗೆ ರಾಜ್ಯಮಟ್ಟದ ಅಧಿಕಾರಿಗಳನ್ನು ನೇಮಿಸಿರುವುದನ್ನು ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ಸ್ವಾಗತಿಸುತ್ತೇವೆ. ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ (ಎಂಖಅ) ನೇತೃತ್ವದಲ್ಲಿ ಕಳೆದ ಸೆಪ್ಟೆಂಬರ್ ತಿಂಗಳಿನಿಂದ ಧಾರವಾಡದಿಂದ ಆರಂಭವಾದ ಹೋರಾಟ ರಾಜ್ಯವ್ಯಾಪಿ ವಿಸ್ತರಿಸಿ ಬಲಿಷ್ಠವಾಗಿ ರೂಪುಗೊಂಡ ಪ್ರತಿಫಲವಾಗಿ ಸರ್ಕಾರ ಹುದ್ದೆಗಳ ಭರ್ತಿಗೆ ಮುಂದಾಗಿದೆ.**




ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ ಸಲಹೆಗಾರರಾದ ಮಾಜಿ ಲೋಕಾಯುಕ್ತರಾದ ಜಸ್ಟಿಸ್ ಸಂತೋಷ್ ಹೆಗ್ಡೆ, ಹಿರಿಯ ಸಾಮಾಜಿಕ ಹೋರಾಟಗಾರರಾದ ಎಸ್. ಆರ್. ಹಿರೇಮಠ್, ರಾಮಾಂಜನಪ್ಪ ಆಲ್ದಳ್ಳಿ, ಡಾ. ಜಿ. ಶಶಿಕುಮಾರ್ ಅವರ ಮಾರ್ಗದರ್ಶನದಲ್ಲಿ ಈ ಹೋರಾಟ ಗಟ್ಟಿ ವೈಚಾರಿಕ ತಳಹದಿಯ ಮೇಲೆ ರೂಪುಗೊಂಡಿತ್ತು. ಈ ಹೋರಾಟದ ಸಂದರ್ಭದಲ್ಲಿ ಸರ್ಕಾರ ಪೊಲೀಸರ ಮೂಲಕ ಹೋರಾಟಗಳನ್ನು ಹತ್ತಿಕ್ಕಲು ಪ್ರಯತ್ನಿಸಿದಾಗಲೂ ಉದ್ಯೋಗಾಕಾಂಕ್ಷಿಗಳು ಹೋರಾಟ ಸಮಿತಿಯ ನೇತೃತ್ವದಲ್ಲಿ ಸಮರಶೀಲ ಹೋರಾಟಗಳನ್ನು ನಡೆಸಿದ್ದರು. ಪೊಲೀಸರು ಹೋರಾಟ ಸಮಿತಿಯ ನಾಯಕರನ್ನು ಹಲವು ಸಲ ಬಂಧಿಸಿದ್ದರು, ಪ್ರಕರಣಗಳನ್ನೂ ದಾಖಲಿಸಿದ್ದರು.

ಈ ಕುರಿತು ನಿರಂತರವಾಗಿ ರಾಯಚೂರಿನಲ್ಲಿ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ ನೇತೃತ್ವದಲ್ಲಿ ಹಲವಾರು ರೀತಿಯಲ್ಲಿ ಪ್ರತಿಭಟನೆ ನಡೆಸಲಾಗಿದೆ. ಶಿಕ್ಷಕರು, ಪೋಲೀಸ್ ನೇಮಕಾತಿಗಾಗಿ ಹೋರಾಟ ನಡೆಸಲಾಗಿದೆ. ರಾಜ್ಯ ಸರ್ಕಾರ ಮತ್ತೆ ಯಾವುದೇ ಕುಂಟು ನೆಪಗಳನ್ನು ನೀಡದೇ ಕೂಡಲೇ ಈ ಎಲ್ಲಾ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಬೇಕು, ಎಲ್ಲಾ ರೀತಿಯ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಿ, ಪಾರದರ್ಶಕ ನೇಮಕಾತಿಗಾಗಿ ಕೆಪಿಎಸ್‌ಸಿಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಪಿ.ಸಿ. ಹೋಟಾ ಸಮಿತಿಯ ವರದಿಯನ್ನು ತಕ್ಷಣವೇ ಜಾರಿಗೊಳಿಸಬೇಕು. ಈಗ ಅರ್ಜಿ ಕರೆದಿರುವ ಪೊಲೀಸ್ ನೇಮಕಾತಿ ಸೇರಿದಂತೆ ಎಲ್ಲಾ ನೇಮಕಾತಿಗಳ ದುಬಾರಿ ಅರ್ಜಿ ಶುಲ್ಕವನ್ನು ಕೈಬಿಡಬೇಕು ಹಾಗೂ ನೇಮಕಾತಿ ಪರೀಕ್ಷೆ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಉಚಿತ ಸಾರಿಗೆ ಒದಗಿಸಬೇಕು ಎಂದು ಈ ಮೂಲಕ ಅಗ್ರಹಿಸುತ್ತೇವೆ. ಅದೇರೀತಿ ಸರ್ಕಾರವು ಅನುಮೋದನೆ ನೀಡಿದ ಎಲ್ಲಾ ಹುದ್ದೆಗಳಿಗೂ ಅಧಿಸೂಚನೆ ಹೊರಡಿಸುವವರೆಗೂ ಉದ್ಯೋಗಾಕಾಂಕ್ಷಿಗಳು ಎಚ್ಚರದಿಂದಿರಬೇಕು ಹಾಗೂ ರಾಜ್ಯಸರ್ಕಾರ ನುಡಿದಂತೆ ನಡೆದುಕೊಳ್ಳದಿದ್ದರೆ ಉದ್ಯೋಗಾಕಾಂಕ್ಷಿಗಳು ಮತ್ತೆ ಸಂಘಟಿತ ಹೋರಾಟಕ್ಕೆ ಸಜ್ಜಾಗಬೇಕು ಎಂದು ಈ ಮೂಲಕ ಕರೆ ನೀಡುತ್ತೇವೆ. ಚನ್ನಬಸವ ಜಾನೇಕಲ್ ರಾಜ್ಯ ಸಹ ಸಂಚಾಲಕರು, ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ, ಕರ್ನಾಟಕ

# Sunrise
## Group Of Institutions



President
**Irfan K.**

# ಸನ್ ರೈಸ್
## ಡಿ-ಫಾರ್ಮಸಿ, ನರ್ಸಿಂಗ್, ಪಾರಾ ಮೆಡಿಕಲ್ ಕಾಲೇಜು.

**Courses :**

1. **D-PHARMACY**
   DURATION 2 YEARS
   ELIGIBILITY PUC SCIENCE PASS.
2. **GNM NURSING**
   DURATION 3 YEARS
   ELIGIBILITY PUC ARTS & COMMERCE & SCIENCE PASS.
3. **PARAMEDICAL**
   (DMLT, DHI, DOT-AT)
   DURATION 3 YEARS
   ELIGIBILITY SSLC PASS.

SCAN ME
ಬೂತ್ ಮಾಹಿತಿ ತಿಳಿದುಕೊಳ್ಳಿ.

**ADMISSIONS OPEN FOR 2026-27**

## ಪಲ್ಸ್ ಪೋಲಿಯೋ
## ಲಸಿಕಾ ಅಭಿಯಾನ 2026

2 ಹನಿ
ಜೀವನ
ಭದ್ರತೆ

ಜೂನ್ 28ರಂದು ನಡೆಯುವ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಕಾರ್ಯ ನಿರ್ವಹಿಸುವ ನಿಮ್ಮ ಹತ್ತಿರದ ಬೂತ್‌ಗಳನ್ನು QR Codes ಸ್ಕ್ಯಾನ್ ಮಾಡಿ ಮಾಹಿತಿ ತಿಳಿದುಕೊಳ್ಳಿ.

**ಜೂನ್ 28**
ಬೂತ್ ದಿನುವೇ

ಹುಟ್ಟಿನಿಂದ ಐದು ವರ್ಷಗಳ ಒಳಗಿನ ನಿಮ್ಮ ಮಕ್ಕಳಿಗೆ ಪಲ್ಸ್ ಪೋಲಿಯೋ ತಪ್ಪದೇ ಹಾಕಿಸಿ




2 ಹನಿ – ಸಂಪೂರ್ಣ ರಕ್ಷಣೆ
ಪಲ್ಸ್ ಪೋಲಿಯೋ – ಪ್ರತಿಯೊಬ್ಬರ ಜವಾಬ್ದಾರಿ

NEAR VASAVI KALYANA MANTAPA
PWD CAMP SINDHANUR-584128.

CONTACT: 8197143588
9036731385

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101